09 December 2025 Tuesday | SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಋಣ ಇಲ್ಲದಿದ್ದರೆ ಕೈಯಿಂದ ತುತ್ತು ಜಾರಿ ನೆಲಕ್ಕೆ ಬೀಳುತ್ತದೆ!
ಹೀಗಾಗಿ ಪ್ರತಿಯೊಂದಕ್ಕೂ ಋಣ ಎನ್ನುವುದು ತುಂಬಾ ಮುಖ್ಯ!

ಸ್ನೇಹಾ ಆನಂದ್

**ಒಂದೊಳ್ಳೆ ಮಾತು**

ಯಾರಿದ್ದರು,
ಯಾರಿಲ್ಲದಿದ್ದರೂ ಬದುಕು
"ಸಾಗುತ್ತದೆ.., ಒಮ್ಮೆ
ನಾವಂದುಕೊಂಡ ಕಡೆಗೆ,,,,
ಇನ್ನೊಮ್ಮೆ ನಾವಂದುಕೊಳ್ಳದ
ಕಡೆಗೆ.., ಮತ್ತೊಮ್ಮೆ ನಾವೆಂದು
ಊಹಿಸದ ಕಡೆಗೆ....,

ಮೈಲಾರ ಸಾವಿತ್ರಿಬಾಯಿ

info.varthaman@gmail.com

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 49 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

## ನಿಮ್ಮ ಹಾಗೆ ನಾನು ನಾಟಿ ಕೋಳಿ ತಿನ್ನಲ್ಲ!




**ಬೆಳಗಾವಿ:** ಸುವರ್ಣಸೌಧದಲ್ಲಿ ಅಧಿವೇಶನ ಆರಂಭವಾಗುವುದಕ್ಕೂ ಮುನ್ನ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಕಾರಿಡಾರ್ ನಲ್ಲಿ ಮಾತುಕತೆ ನಡೆಸಿದರು. ಈ ವೇಳೆ ಅಶೋಕ ಅವರ ಹೆಗಲಿಗೆ ಕೈಇಟ್ಟು ಸಿದ್ದರಾಮಯ್ಯ ಆಪ್ತವಾಗಿ ಮಾತನಾಡಿದರು.

ಈ ವೇಳೆ ಸಿದ್ದರಾಮಯ್ಯ ಅವರ ಕೈಕುಲುಕಿ ವಿಪಕ್ಷ ನಾಯಕರು ಶುಭ ಕೋರಿದರು. ಸಿಎಂ, ನಮ್ಮ ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯ ಮಾಡ್ತೀರೇನಪ್ಪಾ ಎಂದು ನಗುನಗುತ್ತಲೇ ಕಿಚಾಯಿಸಿದರು. ಇದಕ್ಕೆ ಇಬ್ಬರು ನಾಯಕರು ಯಾವುದೇ ಉತ್ತರ ನೀಡದೇ ನಕ್ಕರು.

ಅಶೋಕ್ ಅವರನ್ನು ಉದ್ದೇಶಿಸಿ ಮಾತನಾಡಿದ ಸಿಎಂ ಸಿದ್ದರಾಮಯ್ಯ, ಏನ್ ಸಣ್ಣ ಆಗಿದ್ದೀಯಾ ಅಶೋಕ್ ಎಂದು ಕೇಳಿದರು. ಇದಕ್ಕೆ ಉತ್ತರಿಸಿದ ಅಶೋಕ್, 'ನಿಮ್ಮ ಥರ ನಾಟಿ ಕೋಳಿ ತಿನ್ನಲ್ಲ ಸರ್. ನಾನು ಎಲ್ಲವನ್ನು ಬಿಟ್ಟಿದ್ದೀನಿ ಎಂದರು. ಈ ಉತ್ತರಕ್ಕೆ ಸಿಎಂ, ಹೇ.. ತಿನ್ನು ಏನೂ ಆಗಲ್ಲ. ಬಾ ತಿನ್ನೋಣ ಎಂದರು. ಅಶೋಕ್ ನಕ್ಕು ಮುಂದೆ ಸಾಗಿದರು.

## ಸಭಾಪತಿ ಹೊರಟ್ಟಿ ವಿರುದ್ಧ ನೇಮಕಾತಿ ಹಗರಣ ಆರೋಪ



**ಬೆಳಗಾವಿ:** ವಿಧಾನ ಪರಿಷತ್ ನಲ್ಲಿ ನಡೆದಿರುವ ನೇಮಕಾತಿ ಅಕ್ರಮದ ಬಗ್ಗೆ ನನ್ನ ಬಳಿ ದಾಖಲೆ ಇವೆ. ದಾಖಲೆಯನ್ನು ಸದನದ ಮುಂದೆ ಇಡುತ್ತೇನೆ ಎಂದು ಸಭಾಪತಿ ಬಸವರಾಜ ಹೊರಟ್ಟಿ ವಿರುದ್ಧ ಪರಿಷತ್ ಸದಸ್ಯ ನಾಗರಾಜ್ ಯಾದವ್ ಆರೋಪ ಮಾಡಿದ್ದಾರೆ.

ಹೊರಟ್ಟಿ ಯಾರಿಗೆ ಹೇಡಿ ಅಂತಾರೆ. ಮೊದಲು ಸದನದಲ್ಲಿ ಚರ್ಚೆಗೆ ಅವಕಾಶ ಕೊಡಿ. ಅವರು ಬಿಜೆಪಿ ಸಭಾಪತಿ, ನಮಗ್ಯಾಕೆ ಮುಲಾಜು. ಈ ವಿಷಯನ್ನು ಸಿಎಂ, ಡಿಸಿಎಂ ಗಮನಕ್ಕೂ ತರುತ್ತೇನೆ. ಶಾಸಕಾಂಗ ಪಕ್ಷದ ಸಭೆಯಲ್ಲಿ ಪ್ರಸ್ತಾಪ ಮಾಡುತ್ತೇವೆ. ಹೈಕಮಾಂಡ್ ಅನುಮತಿ ಕೊಟ್ಟರೆ ಸಭಾಪತಿ ವಿರುದ್ಧ ಅವಿಶ್ವಾಸ ಮಂಡಿಸುತ್ತೇವೆ ಎಂದು ಹೇಳಿದರು.

ಅವರು ಹೇಡಿ ಅಲ್ಲ ಎನ್ನುವುದಾದರೆ ನನಗೆ ಚರ್ಚೆಗೆ ಅವಕಾಶ ಕೊಡಿ. ಯಾರು ಹೇಡಿ? ಯಾರು ಹೇಡಿ ಅಲ್ಲ ಗೊತ್ತಾಗಲಿ. ತನಿಖೆಗೆ ಕೊಡಲಿ. ಸಮಯ ನಿಗದಿ ಮಾಡಲಿ. 15 ಸಿಎಂಗಳ ಜೊತೆ ಕೆಲಸ ಮಾಡಿದ್ದೀನಿ ಅನ್ನೋದಲ್ಲ. ಎಷ್ಟು ಸಿಎಂಗಳ ಜೊತೆಯಲ್ಲಾದರೂ ಕೆಲಸ ಮಾಡಲಿ ಎಂದು ತಿರುಗೇಟು ನೀಡಿದರು.

# ನಾಯಕತ್ವ ಬದಲಿಗೆ 'ಹೈ ನಕಾರ'

## ಡಿಕೆಶಿ ಆಕಾಂಕ್ಷೆಗೆ ಹೈಕಮಾಂಡ್ ಸ್ಪಂದಿಸಿಲ್ಲ: ಯತೀಂದ್ರ ಸಿದ್ದರಾಮಯ್ಯ

**ಬೆಳಗಾವಿ:** ರಾಜ್ಯದಲ್ಲಿ ನಾಯಕತ್ವ ಬದಲಾವಣೆಗೆ ಹೈಕಮಾಂಡ್ ಸಮ್ಮತಿಸಿಲ್ಲ ಎಂದು ಸಿದ್ದರಾಮಯ್ಯ ಪುತ್ರ ಯತೀಂದ್ರ ಸ್ಫೋಟಕ ಹೇಳಿಕೆ ನೀಡಿದ್ದಾರೆ.

ಬೆಳಗಾವಿ ಸುವರ್ಣ ವಿಧಾನಸೌಧದ ಆವರಣದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಡಿ.ಕೆ.ಶಿವಕುಮಾರ್ ಅವರು ಅವಕಾಶ ಕೊಡಿ ಎಂದು ಹೈಕಮಾಂಡ್‌ಗೆ ಕೇಳಿದ್ದರು. ಆದರೆ, ನಾಯಕತ್ವ ಬದಲಾವಣೆ ಪರಿಸ್ಥಿತಿ ಈಗ ಇಲ್ಲ ಎಂದು ಪಕ್ಷದ ಹೈಕಮಾಂಡ್ ಸ್ಪಷ್ಟವಾಗಿ ಹೇಳಿದೆ ಎಂದು ತಿಳಿಸಿದರು.

ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ 5 ವರ್ಷ ಪೂರೈಸುತ್ತಾರೆ ಎಂಬ ನಂಬಿಕೆ ನನಗಿದೆ. ದೆಹಲಿಯಲ್ಲಿಯೂ ಕರ್ನಾಟಕದಲ್ಲಿ ನಾಯಕತ್ವ ಬದಲಾವಣೆ ಬಗ್ಗೆ ಯಾವುದೇ ಚರ್ಚೆ ನಡೆದಿಲ್ಲ. ಸಿಎಂ ಸಿದ್ದರಾಮಯ್ಯ ಅವರನ್ನು ಹೈಕಮಾಂಡ್ ನಾಯಕರು ಕರೆದಿಲ್ಲ ಎಂದು ಯತೀಂದ್ರ ಸ್ಪಷ್ಟಪಡಿಸಿದ್ದಾರೆ.

ಕಾಂಗ್ರೆಸ್ ನಲ್ಲಿ ಅಧಿಕಾರಕ್ಕಾಗಿ ಯಾವುದೇ ಕಿತ್ತಾಟ ನಡೆದಿಲ್ಲ. ಇದೆಲ್ಲ ಪ್ರತಿಪಕ್ಷದವರ ಸೃಷ್ಟಿ. ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಿನಿಂದ ಸಿಎಂ ಬದಲಾಗುತ್ತಾರೆಂದು ಹೇಳುತ್ತಿದ್ದಾರೆ. ಆದರೆ, ಸಿಎಂ ಬದಲಾಗುತ್ತಾರೆ ಎಂಬುದು ಕನಸು ಕಾಣಬೇಕಷ್ಟೇ ಎಂದು ಪ್ರತಿಪಕ್ಷಗಳ ವಿರುದ್ಧ ವಾಗ್ದಾಳಿ ನಡೆಸಿದರು.


ರಾಜ್ಯ ಸರ್ಕಾರದ ವಿರುದ್ದ ಅವಿಶ್ವಾಸ ನಿರ್ಣಯ ಮಂಡಿಸುವ ಕೆಲವು ಬಿಜೆಪಿ ನಾಯಕರ ಹೇಳಿಕೆಗೆ ಪ್ರತಿಕ್ರಿಯಿಸಿದ ಯತೀಂದ್ರ ಅವರು, ಆ ಪ್ರಯತ್ನಕ್ಕೆ ಕೈಹಾಕಿದರೆ ಮುಖಭಂಗ ಎದುರಿಸುತ್ತಾರೆ. ಆ ಸಾಮರ್ಥ್ಯ ಅವರಿಗೆಲ್ಲಿದೆ ಎಂದು ಪ್ರಶ್ನಿಸಿದರು. ರಾಜ್ಯ ಸರ್ಕಾರಕ್ಕೆ ಸಂಪೂರ್ಣ

ಪುಟ 2ಕ್ಕೆ



## ಡಿಕೆಶಿ ಸಿಎಂ ಆಗುವ ಪರಿಸ್ಥಿತಿ ಬರಲ್ಲ

### ನನ್ನ ವಿರುದ್ಧ ಕೆಲವರ ಷಡ್ಯಂತ್ರ: ಕೆ.ಎನ್.ರಾಜಣ್ಣ ವಾಗ್ದಾಳಿ



**ಬೆಳಗಾವಿ:** ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗುವ ಪರಿಸ್ಥಿತಿಯೇ ಉದ್ಭವವಾಗುವುದಿಲ್ಲ ಎಂದು ಮಾಜಿ ಸಚಿವ ಕೆ.ಎನ್. ರಾಜಣ್ಣ ಹೇಳುವ ಮೂಲಕ ಹೊಸ ಬಾಂಬ್ ಸಿಡಿಸಿದ್ದಾರೆ.

ಮುಖ್ಯಮಂತ್ರಿ ಪುತ್ರ ಯತೀಂದ್ರ ಹೇಳಿಕೆ ನಂತರ ರಾಜಣ್ಣ ಡಿಕೆಶಿ ಮುಖ್ಯಮಂತ್ರಿ ಆಗುವ ಪರಿಸ್ಥಿತಿಯೇ ಉದ್ಭವವಾಗುವುದಿಲ್ಲ ಎಂದು ಸೋಮವಾರ ಮಾಧ್ಯಮಗಳಿಗೆ ತಿಳಿಸಿದರು. ಡಿಕೆಶಿ ಸಿಎಂ ಆದರೆ ನಾನು ಸಂಪುಟ ಸೇರುವುದಿಲ್ಲ ಎಂದು ಈಗಾಗಲೇ ಹೇಳಿದ್ದೇನೆ. ಅವರು ಸಿಎಂ ಆದಾಗ ಆ ಪ್ರಶ್ನೆ ಏಳುತ್ತದೆ. ನಾನು ಕಾಂಗ್ರೆಸ್‌ನಲ್ಲೇ ಇದ್ದವನು. ಕೆಲವರು ಷಡ್ಯಂತ್ರ ಮಾಡಿದ್ದಾರೆ ಎಂದು ಯಾರ ಹೆಸರನ್ನು ಉಲ್ಲೇಖಿಸದೇ ದೂರಿದರು.

ಸಕ್ರಿಯ ರಾಜಕಾರಣದಲ್ಲಿ ಇರುತ್ತೇನೆ ನಾನು ಪಕ್ಷ ಬಿಡುತ್ತೇನೆ ಅಂತ ಯಾರು ಹೇಳಿದ್ದು? ಯತೀಂದ್ರ ಸಿದ್ದರಾಮಯ್ಯ ಹೇಳಿಕೆ ಅವರ

ಪುಟ 2ಕ್ಕೆ


## ಮಂಡ್ಯಕ್ಕೆ ನಿಮ್ಮ ಕೊಡುಗೆ ಏನು: ಎಚ್‌ಡಿಕೆ ಸವಾಲು



**ನವದೆಹಲಿ:** ಮಂಡ್ಯಕ್ಕೆ ನಾನು ಕೊಟ್ಟಿರುವ ಕೊಡುಗೆಯನ್ನು ಪಟ್ಟಿ ಮಾಡಿ ಹೇಳುತ್ತೇನೆ. ನೀವು ಮೊದಲು ಐದು ವರ್ಷ ಮುಖ್ಯಮಂತ್ರಿ ಆಗಿದ್ದಾಗ ಹಾಗೂ ಈಗ ಏನೇನು ಕೊಡುಗೆ ಕೊಟ್ಟಿದ್ದೀರಿ ಎಂಬುದನ್ನು ಹೇಳಿ ಎಂದು ಸಿದ್ದರಾಮಯ್ಯಗೆ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಸವಾಲು ಹಾಕಿದ್ದಾರೆ.

ನವದೆಹಲಿಯ ಗೃಹ ಕಚೇರಿಯಲ್ಲಿ ಸೋಮವಾರ ಮಾಧ್ಯಮ ಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಂದಿನ ಐದು ವರ್ಷದಲ್ಲಿ ಮಂಡ್ಯದಲ್ಲಿ 200ಕ್ಕೂ ಹೆಚ್ಚು ರೈತರು ಸರಣಿ ಆತ್ಮಹತ್ಯೆ ಮಾಡಿಕೊಂಡಿದ್ದೇ ನಿಮ್ಮ ಕೊಡುಗೆ. ಅಂತಹ ಕಷ್ಟಕಾಲದಲ್ಲಿ ನಾನು ಅಧಿಕಾರಕ್ಕೆ ಬಂದ ಮೇಲೆ ಅದೇ ಜಿಲ್ಲೆಯ ರೈತರ 900 ಕೋಟಿ ರೂ. ಸಾಲ ಮನ್ನಾ ಮಾಡಿದೆ. ಇದಕ್ಕಿಂತ ಕೊಡುಗೆ ಬೇಕಾ? ನಿಮ್ಮ ಕಾಲದಲ್ಲಿ ರೈತರ ಜೀವ ಹೋಯಿತು, ನನ್ನ ಕಾಲದಲ್ಲಿ ಜೀವ ಉಳಿಯಿತು. ಇದು ನಿಮಗೆ ಗೊತ್ತಿರಲಿ ಎಂದು ವಾಗ್ದಾಳಿ ನಡೆಸಿದರು.

## ಹಣ ಪಡೆದು ಸಿಎಂ: ಬಿಜೆಪಿ ಸಂಸ್ಕೃತಿ



**ಬೆಳಗಾವಿ:** ಹಣ ಪಡೆದು ಮುಖ್ಯಮಂತ್ರಿ ಮಾಡುವುದು ಬಿಜೆಪಿ ಸಂಸ್ಕೃತಿಯೇ ಹೊರತು, ನಮ್ಮಲ್ಲಿ ಇಲ್ಲ ಸಚಿವ ಡಾ.ಶರಣಪ್ರಕಾಶ ಪಾಟೀಲ ತಿರುಗೇಟು ನೀಡಿದ್ದಾರೆ.

ನವಜೋತ್ ಸಿಂಗ್ ಸಿದ್ದು ಪತ್ನಿ ಕರ್ನಾಟಕದವರೇ? ಇದಕ್ಕೆ ಬಿಜೆಪಿಯವರು ಏಕೆ ಮೈ ಉರಿ ಮಾಡಿಕೊಳ್ಳಬೇಕು? ಎಂದು ಪ್ರಶ್ನಿಸಿದರು. ಉತ್ತರ ಕರ್ನಾಟಕ ಸಮಸ್ಯೆಗಳಿಗೆ ಪರಿಹಾರ ನೀಡುವುದೇ ನಮ್ಮ ಸರ್ಕಾರದ ಮುಖ್ಯ ಉದ್ದೇಶ. ಈ ಭಾಗದ ಅಭಿವೃದ್ಧಿಗೆ ಆದ್ಯತೆ ನೀಡಲಾಗುತ್ತದೆ. ಪ್ರತಿಪಕ್ಷ ಎಂಬ ಕಾರಣಕ್ಕೆ ಆರೋಪ ಮಾಡುವುದು ಬಿಜೆಪಿಯವರ ಚಟ ಎಂದು ಟೀಕಿಸಿದರು.

## ಜನವರಿಯಿಂದಲೇ ಇಂದಿರಾ ಕಿಟ್

### 29,603 ಕ್ವಿಂಟಲ್ ಅಕ್ರಮ ಅಕ್ಕಿ ವಶ: ಸಚಿವ ಮುನಿಯಪ್ಪ



**ಬೆಳಗಾವಿ:** ರಾಜ್ಯದಲ್ಲಿ ಜನವರಿಯಿಂದ 5 ಕೆಜಿ ಹೆಚ್ಚುವರಿ ಅಕ್ಕಿಗೆ ಬದಲಾಗಿ ಇಂದಿರಾ ಕಿಟ್ ನೀಡಲಾಗುವುದು ಎಂದು ಆಹಾರ ಸಚಿವ ಮುನಿಯಪ್ಪ ಭರವಸೆ ನೀಡಿದರು.

ವಿಧಾನ ಪರಿಷತ್ ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಸದಸ್ಯ ಸಿ.ಟಿ.ರವಿ ಮಾತನಾಡಿ, ಬಿಪಿಎಲ್ ಕಾರ್ಡ್ದಾರರಿಗೆ ಕೊಡುವ ಅನ್ನಭಾಗ್ಯ ಅಕ್ಕಿ ಅಕ್ರಮವಾಗಿ ಸಂಗ್ರಹ ಮಾಡಲಾಗುತ್ತಿದೆ. ಈ ಅಕ್ಕಿ ಹೊರ ದೇಶಕ್ಕೆ, ರಾಜ್ಯಗಳಿಗೆ ಅಕ್ರಮವಾಗಿ ಮಾರಾಟ ಮಾಡಲಾಗ್ತಿದೆ. ಸಿಂಗಾಪುರ, ದುಬೈನಲ್ಲಿ ಇದೇ ಅಕ್ಕಿ ಪಾಲಿಶ್ ಮಾಡಿ ಮಾರಾಟ ಮಾಡ್ತಿದ್ದಾರೆ. ಬಡವರ ಅಕ್ಕಿ ಬಡವರಿಗೆ ಸೇರುತ್ತಿಲ್ಲ. ಇದರಲ್ಲಿ ಅಧಿಕಾರಿಗಳೇ ಶಾಮೀಲಾಗಿದ್ದಾರೆ. ಪ್ರತಿ ಜಿಲ್ಲೆಯಲ್ಲೂ ಅಕ್ರಮ ಆಗಿದೆ. ಬೇಲಿಯೇ ಎದ್ದು ಹೊಲ ಮೇಯುತ್ತಿದೆ. ಅಕ್ರಮ ಅಕ್ಕಿ ಸಾಗಾಟ ಪ್ರಕರಣ ತನಿಖೆಗೆ ತಂಡ ರಚನೆ ಮಾಡಬೇಕು ಅಂತ ಒತ್ತಾಯ ಮಾಡಿದರು. ಇದಕ್ಕೆ ಸಚಿವ ಮುನಿಯಪ್ಪ ಉತ್ತರ ನೀಡಿ, ಅನ್ನಭಾಗ್ಯ ಅಕ್ಕಿ ಅಕ್ರಮ ಸಾಗಾಟ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತದೆ. ಅನ್ನಭಾಗ್ಯ ಅಕ್ಕಿ ಹೊರ ದೇಶ, ರಾಜ್ಯಕ್ಕೆ ಸಾಗಾಟ ಮಾಡ್ತಿರೋದು ಗಮನಕ್ಕೆ ಬಂದಿದೆ. ಇದಕ್ಕೆ ಸಂಬಂಧಸಿದಂತೆ ಪ್ರಕರಣ ದಾಖಲಾಗಿದೆ. 2025ರಲ್ಲಿ ಸುಮಾರು 485 ಕೇಸ್ ದಾಖಲು ಮಾಡಲಾಗಿದೆ. 29,603 ಕ್ವಿಂಟಾಲ್ ಅಕ್ಕಿ ವಶಪಡಿಸಿಕೊಳ್ಳಲಾಗಿದೆ. ಕೊಪ್ಪಳ ಕೇಸ್ ಸಿಐಡಿಗೆ ವಹಿಸಲಾಗಿದೆ. ಕಾಳಸಂತೆಯಲ್ಲಿ ಅಕ್ಕಿ ಮಾರಾಟಕ್ಕೆ ಕಡಿವಾಣ ಹಾಕಲು ಕ್ರಮವಹಿಸಲಾಗಿದೆ ಎಂದರು.

ಪ್ರಣಾಳಿಕೆಯಲ್ಲಿ ತಿಳಿಸಿದಂತೆ 10 ಕೆ.ಜಿ ಅಕ್ಕಿ ಕೊಡಲಾಗುತ್ತಿದೆ. ಈಗ ಇಂದಿರಾ ಕಿಟ್ ಕೊಡುವ ನಿರ್ಧಾರ ಮಾಡಲಾಗಿದೆ. ಇಂದಿರಾ ಕಿಟ್ ಕೊಟ್ಟಾಗ ಅಕ್ರಮ ಅಕ್ಕಿ ಸಾಗಾಟ ತಡೆಗಟ್ಟಬಹುದು. ಪೌಷ್ಟಿಕ ಆಹಾರ ಜನರಿಗೆ

ಪುಟ 2ಕ್ಕೆ

## ಕನ್ನಡ ಮಾಧ್ಯಮ ಶಾಲೆ ಮುಚ್ಚಲ್ಲ

### ಅಧಿವೇಶನದಲ್ಲಿ ಸಚಿವ ಮಧು ಬಂಗಾರಪ್ಪ ಭರವಸೆ



**ಬೆಳಗಾವಿ:** ರಾಜ್ಯದಲ್ಲಿ ಕನ್ನಡ ಮಾಧ್ಯಮದ ಯಾವುದೇ ಶಾಲೆಗಳನ್ನು ಮುಚ್ಚುವುದಿಲ್ಲ ಎಂದು ಶಿಕ್ಷಣ ಸಚಿವ ಎಸ್.ಮಧು ಬಂಗಾರಪ್ಪ ತಿಳಿಸಿದ್ದಾರೆ.

ವಿಧಾನ ಪರಿಷತ್‌ನಲ್ಲಿ ಸೋಮವಾರ ಪ್ರಶ್ನೋತ್ತರ ವೇಳೆಯಲ್ಲಿ ಸದಸ್ಯರಾದ ಚಿದಾನಂದ್ ಎಂ.ಗೌಡ ಅವರ ಚುಕ್ಕೆ ಗುರುತಿನ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಒಂದೇ ಒಂದು ಮಗು ಇದ್ದರೂ ಸರ್ಕಾರಿ ಶಾಲೆಯನು ಮುಚ್ಚುವುದಿಲ್ಲ. 2025–26ನೇ ಸಾಲಿನಲ್ಲಿ 900 ಸರ್ಕಾರಿ ಶಾಲೆಗಳನ್ನು ಕೆಪಿಎಸ್ ಶಾಲೆಗಳನ್ನಾಗಿ ಉನ್ನತೀಕರಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಒಂದು ಕೆಪಿಎಸ್ ಶಾಲೆಯನ್ನು ಹಂತ ಹಂತವಾಗಿ ಪ್ರಾರಂಭಿಸಲು ಕ್ರಮವಹಿಸಲಾಗುವುದು ಎಂದು ಹೇಳಿದರು.

ನಾವು ಬಜೆಟ್‌ನಲ್ಲಿ 500 ಕೆಪಿಎಸ್ ಶಾಲೆಗಳನ್ನು ಆರಂಭಿಸುವ ಘೋಷಣೆ ಮಾಡಿದ್ದೇವೆ. 2025–26ನೇ ಸಾಲಿನಲ್ಲಿ ಈಗಾಗಲೇ ಕಾರ್ಯಾಚರಣೆಯಲ್ಲಿರುವ 309 ಕೆಪಿಎಸ್ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕದಿಂದ ಪದವಿ ಪೂರ್ವ ತರಗತಿವರೆಗೆ ವಿಸ್ತರಿಸಲಾಗಿದೆ. ಒಟ್ಟು 2,72,464 ವಿದ್ಯಾರ್ಥಿಗಳು ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಈ ಕೆಪಿಎಸ್ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳಿಗೆ ಅತಿಥಿ ಶಿಕ್ಷಕರನ್ನು ನೇಮಕ ಮಾಡಲಾಗಿದೆ. ಶಿಕ್ಷಕರ ಕೋರಿಕೆ ವರ್ಗಾವಣೆ ಪ್ರಕ್ರಿಯೆ ಚಾಲ್ತಿಯಲ್ಲಿದೆ. ವರ್ಗಾವಣೆ ಪ್ರಕ್ರಿಯೆ ಪೂರ್ಣಗೊಂಡ ನಂತರ ಪರಿಪೂರ್ಣವಾಗಿ ಹೆಚ್ಚುವರಿ ಶಿಕ್ಷಕರ ಮರುಹೊಂದಾಣಿಕೆ ಪ್ರಕ್ರಿಯೆಯನ್ನು ತರ್ಕಬದ್ಧಗೊಳಿಸುವ ಮೂಲಕ ಕೆಪಿಎಸ್ ಶಾಲೆಗಳಲ್ಲಿರುವ ಖಾಲಿ ಹುದ್ದೆಗಳನ್ನು ಆದ್ಯತೆ ಮೇರೆಗೆ ಭರ್ತಿ ಮಾಡಲು ಕ್ರಮವಹಿಸಲಾಗುವುದು ಎಂದು ತಿಳಿಸಿದರು.

ಉತ್ತಮ ಕಲಿಕೆ, ಉಜ್ವಲ ಭವಿಷ್ಯ ಎಂಬುದು ಕೆಪಿಎಸ್ ಶಾಲೆಗಳ ಧ್ಯೇಯ ವಾಕ್ಯವಾಗಿದೆ. ಪ್ರತಿ

ಪುಟ 2ಕ್ಕೆ

## ಎಂಇಎಸ್ ಪುಂಡಾಟ: ರಾಜ್ಯದ ಬಸ್ ಬಂದ್



**ಬೆಳಗಾವಿ:** ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಸೋಮವಾರ ವಿಧಾನ ಮಂಡಲ ಅಧಿವೇಶನ ಆರಂಭವಾದ ಮೊದಲ ದಿನವೇ ಮಹಾರಾಷ್ಟ್ರದ ಶಿವಸೇನೆ ಹಾಗೂ ಎಂಇಎಸ್ ಕಾರ್ಯಕರ್ತರು ಪುಂಡಾಟಿಕೆ ಮೆರೆದಿದ್ದಾರೆ. ಗಡಿಭಾಗದಲ್ಲಿ ಉದ್ವಿಗ್ನತೆ ಹೆಚ್ಚಿಸಿದೆ.

ಬೆಳಗಾವಿಯಲ್ಲಿ ಎಂಇಎಸ್ ಕಾರ್ಯಕರ್ತರು ಸೋಮವಾರ ಮಹಾಮೇಳಾವ್ ನಡೆಸಲು ಮುಂದಾಗಿದ್ದರು. ಆದರೆ ಜಿಲ್ಲಾಡಳಿತ ಅನುಮತಿ ನೀಡಿಲ್ಲ. ಹೀಗಾಗಿ ಶಿವಸೇನೆ ಕೆಎಸ್‌ಆರ್ ಟಿಸಿ ಬಸ್ಸುಗಳನ್ನು ತಡೆದು ಪ್ರತಿಭಟನೆ ನಡೆಸಿದರು. ಹೀಗಾಗಿ ಮುನ್ನೆಚ್ಚರಿಕೆ ಕ್ರಮವಾಗಿ ಬಸ್ ಸಂಚಾರ ತಡೆಯುವಂತೆ ಪೊಲೀಸರು ಸೂಚಿಸಿದ ಕಾರಣ ಸಾರಿಗೆ ಸಂಸ್ಥೆಯ ಅಧಿಕಾರಿಗಳು ಮಹಾರಾಷ್ಟ್ರಕ್ಕೆ ರಾಜ್ಯದಿಂದ ಬಸ್ ಸಂಚಾರವನ್ನು ಬಂದ್ ಮಾಡಿದ್ದಾರೆ.

## ಬಿಜೆಪಿ ತಟ್ಟೆಯಲ್ಲಿ ಕತ್ತೆ ಸತ್ತಿದೆ!



**ಬೆಳಗಾವಿ:** ಬಿಜೆಪಿಯವರ ತಟ್ಟೆಯಲ್ಲಿ ಕತ್ತೆ ಸತ್ತುಬಿದ್ದಿದೆ. ಅದನ್ನು ಸ್ವಚ್ಛ ಮಾಡಿಕೊಳ್ಳುವುದನ್ನು ಬಿಟ್ಟು ಮತ್ತೊಬ್ಬರ ತಟ್ಟೆಯಲ್ಲಿ ನೊಣ ಹುಡುಕುತ್ತಿದ್ದಾರೆಂದು ಸಚಿವ ಶಿವರಾಜ್ ತಂಗಡಗಿ ತಿರುಗೇಟು ನೀಡಿದರು.

ಸಿ.ಎಂ ಕುರ್ಚಿಗೆ ಸಿದ್ದರಾಮಯ್ಯ, ಶಿವಕುಮಾರ್ ಕಸರತ್ತು ನಡೆಸಿದ್ದಾರೆ ಎಂಬ ಬಿಜೆಪಿ ನಾಯಕರ ಹೇಳಿಕೆಗೆ ನಗರದಲ್ಲಿ ಸೋಮವಾರ ಪ್ರತಿಕ್ರಿಯಿಸಿದ ಅವರು, ಅಧಿವೇಶನ ಆರಂಭವಾಗಿದೆ. ಉತ್ತರ ಕರ್ನಾಟಕದ ಬಗ್ಗೆ ಚರ್ಚೆ ಮಾಡಬೇಕು ಎಂದು ಎಲ್ಲರ ಒತ್ತಾಯ ಇದೆ. ಮೊದಲು ಬಿಜೆಪಿಯವರು ಸದನದಲ್ಲಿ ಭಾಗವಹಿಸಿ ಸಮಸ್ಯೆ ಚರ್ಚೆ ಮಾಡಲಿ. ಅದನ್ನು ಬಿಟ್ಟು ಉಳಿದೆಲ್ಲ ಮಾತನಾಡುತ್ತಿದ್ದಾರೆ. ತಮ್ಮ ಮನೆಯೇ ಒಡೆದು ನೂರು ಬಾಗಿಲವಾಗಿದೆ ಎಂದು ಟೀಕಿಸಿದರು.

## ಮೆಕ್ಕೆಜೋಳಕ್ಕೆ ಬೆಂಬಲ ಬೆಲೆ ಕೇಂದ್ರದ ಕೆಲಸ: ಚಲುವರಾಯಸ್ವಾಮಿ





**ಬೆಳಗಾವಿ:** ಕಲ್ಯಾಣ ಕರ್ನಾಟಕ ಹಾಗೂ ಕಿತ್ತೂರು ಕರ್ನಾಟಕ ಭಾಗದಲ್ಲಿ ಯಾವಾಗಲೂ ಅತಿವೃಷ್ಟಿ ಅಥವಾ ಅನಾವೃಷ್ಟಿ ಸಮಸ್ಯೆ ಇದ್ದೇ ಇರುತ್ತದೆ. ಈ ಬಾರಿ 60 ಲಕ್ಷ ಮೆಟ್ರಿಕ್ ಟನ್ ಮೆಕ್ಕೆಜೋಳವನ್ನು ಈ ಭಾಗದಲ್ಲಿ ಬೆಳೆದಿದ್ದಾರೆ. ಇದಕ್ಕೆ ಬೆಂಬಲ ಬೆಲೆ ಘೋಷಣೆ ಮಾಡಬೇಕಿರುವುದು ಕೇಂದ್ರ ಸರ್ಕಾರದ ಜವಾಬ್ದಾರಿ ಎಂದು ಕೃಷಿ ಸಚಿವ ಚಲುವರಾಯಸ್ವಾಮಿ ಹೇಳಿದರು.

ನಗರದಲ್ಲಿ ಸೋಮವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಕಬ್ಬು ಬೆಳೆಗಾರರ ಸಮಸ್ಯೆಗೆ ಈಗಾಗಲೇ ನಮ್ಮ ಸರ್ಕಾರ ಕ್ರಮ ಕೈಗೊಂಡಿದೆ. ಕೇಂದ್ರಕ್ಕೆ ಪತ್ರ ಬರೆದು ಮನವಿ ಮಾಡಿದರೂ ಮೆಕ್ಕೆ ಜೋಳ ಖರೀದಿಗೆ ಒಪ್ಪಿಗೆ ಕೊಡಲಿಲ್ಲ. ಎಥೆನಾಲ್ ಖರೀದಿ ಮಾಡುವಂತೆ ಹೇಳಿದ್ದೇವೆ. ಇದರ ಸಾಗಣೆ

ಪುಟ 2ಕ್ಕೆ

## ನಟಿ ಅತ್ಯಾಚಾರ ಪ್ರಕರಣ: ನಟ ದಿಲೀಪ್ ಖುಲಾಸೆ



**ಕೊಚ್ಚಿ:** ಮಲಯಾಳಂ ಚಲನಚಿತ್ರೋದ್ಯಮವನ್ನು ಬೆಚ್ಚಿಬೀಳಿಸಿದ ಖ್ಯಾತ ನಟಿಯ ಅಪಹರಣ ಮತ್ತು ಸಾಮೂಹಿಕ ಅತ್ಯಾಚಾರ ಪ್ರಕರಣದಲ್ಲಿ ನಟ ದಿಲೀಪ್ ಅವರನ್ನು ಕೇರಳ ಕೋರ್ಟ್ ಖುಲಾಸೆಗೊಳಿಸಿದೆ. ಪ್ರಮುಖ ಆರೋಪಿ ಪಲ್ಸರ್ ಸುನಿ ಸೇರಿದಂತೆ ಆರು ಆರೋಪಿಗಳು ದೋಷಿ ಎಂದು ಸೋಮವಾರ ತೀರ್ಪು ನೀಡದೆ.

2017ರಲ್ಲಿ ನಟಿಯನ್ನು ಅಪಹರಿಸಿ ಲೈಂಗಿಕ ದೌರ್ಜನ್ಯ ಎಸಗಿದ ಪ್ರಕರಣದ ಸುದೀರ್ಘ ವಿಚಾರಣೆ ನಡೆಸಿದ ಎರ್ನಾಕುಲಂ ಪ್ರಿನ್ಸಿಪಾಲ್ ಸೆಷನ್ಸ್ ನ್ಯಾಯಾಧೀಶ ಹನಿ ಎಂ.ವರ್ಗೀಸ್ ಅವರು, ನಟ ದಿಲೀಪ್ ಅವರನ್ನು ಖುಲಾಸೆಗೊಳಿಸಿ ತೀರ್ಪು ನೀಡಿದ್ದಾರೆ. ಖ್ಯಾತ ನಟಿಯನ್ನು ಅಪಹರಿಸಿ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದಲ್ಲಿ ಪಲ್ಸರ್ ಸುನಿ, ಮಾರ್ಟಿನ್ ಆಂಟೋನಿ, ಬಿ ಮಣಿಕಂದನ್, ವಿ.ಪಿ ವಿಜೀಶ್, ಎಚ್.ಸಲೀಂ ಮತ್ತು ಪ್ರದೀಪ್ ಅವರನ್ನು ತಪ್ಪಿತಸ್ಥರೆಂದು

ಪುಟ 2ಕ್ಕೆ

## ಸಿಎಂಗೆ ಸುಪ್ರೀಂ ಕೋರ್ಟ್ ನೋಟಿಸ್

### ವಿಧಾನಸಭಾ ಚುನಾವಣೆ ವೇಳೆ ಅಕ್ರಮ ಆರೋಪ



**ಬೆಂಗಳೂರು:** ಮುಖ್ಯಮಂತ್ರಿ ಕುರ್ಚಿ ಕದನದ ಸಂದರ್ಭದಲ್ಲಿಯೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸುಪ್ರೀಂ ಕೋರ್ಟ್ ಶಾಕ್ ನೀಡಿದೆ. ರಾಜ್ಯ ವಿಧಾನಸಭಾ ಚುನಾವಣೆ ವೇಳೆ ಅಕ್ರಮ ಆರೋಪಕ್ಕೆ ಸಂಬಂಧಿಸಿದಂತೆ ಸಿದ್ದರಾಮಯ್ಯ ಅವರಿಗೆ ಸುಪ್ರೀಂಕೋರ್ಟ್ ನೋಟಿಸ್ ಜಾರಿ ಮಾಡಿದೆ.

ವರುಣಾ ವಿಧಾನಸಭಾ ಕ್ಷೇತ್ರದಿಂದ ಆಯ್ಕೆ ಪ್ರಶ್ನಿಸಿ ಶಂಕರ್ ಎಂಬುವವರು ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ಅರ್ಜಿ ವಜಾಗೊಳಿಸಿತ್ತು. ಹೈಕೋರ್ಟ್ ಆದೇಶ ಪ್ರಶ್ನಿಸಿ ಸುಪ್ರೀಂಕೋರ್ಟ್‌ಗೆ ಅವರು ಮೇಲ್ಮನವಿ ಸಲ್ಲಿಸಿದ್ದರು. ಜನತೆಗೆ ಹಲವಾರು ಗ್ಯಾರಂಟಿಗಳ ಆಮಿಷ ವನ್ನು ಒಡ್ಡುವ ಮೂಲಕ ಸಿದ್ದರಾಮಯ್ಯನವರು 2023ರ ಚುನಾವಣೆಯಲ್ಲಿ ಗೆದ್ದಿದ್ದಾರೆ. ಮತದಾರರಿಗೆ ಆಮಿಷ ನೀಡಿ ಮತದಾರರನ್ನು ಆಕರ್ಷಿಸುವುದು

ಪುಟ 2ಕ್ಕೆ

### ಖುದ್ದು ಹಾಜರಿಗೆ ಆದೇಶ



**ಹಾಸನ:** ಮುಖ್ಯಮಂತ್ರಿ ಖುದ್ದು ಹಾಜರಾತಿಗೆ ಸುಪ್ರೀಂ ಕೋರ್ಟ್ ಸಮನ್ಸ್ ಜಾರಿ ಮಾಡಿದೆ. ರಾಜ್ಯದ ಎಲ್ಲಾ 224 ಜನ ಎಂಎಲ್‌ಎಗಳು ಅನರ್ಹವಾಗುವುದು ಖಚಿತ ಎಂದು ವಕೀಲ ದೇವರಾಜೇಗೌಡ ಬಾಂಬ್ ಸಿಡಿಸಿದರು.

ಸುಪ್ರೀಂ ಕೋರ್ಟ್ನಿಂದ ಸಿಎಂ ಸಿದ್ದರಾಮಯ್ಯಗೆ ಸಮನ್ಸ್ ಜಾರಿಗೊಳಿಸಿರುವ ಕುರಿತು ಹಾಸನದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 2023ರ ಚುನಾವಣೆಯಲ್ಲಿ ಉಚಿತ ಗ್ಯಾರಂಟಿಗಳನ್ನ ಘೋಷಣೆ ಮಾಡಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ

ಪುಟ 2ಕ್ಕೆ

## ತುರ್ತುಪರಿಸ್ಥಿತಿ ದೇಶದ 'ಕರಾಳ ಅಧ್ಯಾಯ'

### ವಂದೇ ಮಾತರಂ' ಗೀತೆ 150ನೇ ಸ್ಮರಣೆ: ಪ್ರಧಾನಿ ನರೇಂದ್ರ ಮೋದಿ ವಾಗ್ದಾಳಿ



**ನವದೆಹಲಿ:** 'ವಂದೇ ಮಾತರಂ' ಗೀತೆ 100 ವರ್ಷಗಳನ್ನು ಪೂರೈಸಿದಾಗ ರಾಷ್ಟ್ರ ತುರ್ತುಪರಿಸ್ಥಿತಿಯಿಂದ ಬಂಧಿಸಲ್ಪಟ್ಟಿತ್ತು. ಆ ಸಮಯದಲ್ಲಿ, ಸಂವಿಧಾನದ ಕತ್ತು ಹಿಸುಕಲಾಯಿತು ಮತ್ತು ದೇಶಭಕ್ತಿಗಾಗಿ ಬದುಕಿದವರನ್ನು ಜೈಲಿಗೆ ತಳ್ಳಲಾಯಿತು. ತುರ್ತು ಪರಿಸ್ಥಿತಿಯು ನಮ್ಮ ಇತಿಹಾಸದಲ್ಲಿ ಒಂದು ಕರಾಳ ಅಧ್ಯಾಯವಾಗಿತ್ತು ಎಂದು ಪ್ರಧಾನಿ ನರೇಂದ್ರ ಮೋದಿ ವಾಗ್ದಾಳಿ ನಡೆಸಿದರು.

'ವಂದೇ ಮಾತರಂ' ಗೀತೆಯ 150ನೇ ವಾರ್ಷಿಕೋತ್ಸವ ಕುರಿತು ಲೋಕಸಭೆಯಲ್ಲಿ ಸೋಮವಾರ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, ತುರ್ತು ಪರಿಸ್ಥಿತಿಯಿಂದ ಸಂವಿಧಾನವನ್ನು 'ಹತ್ತಿಕ್ಕಲಾಯಿತು' ಮತ್ತು ರಾಷ್ಟ್ರವು ಸರಪಳಿಯಲ್ಲಿ ಬಂಧಿಸಲ್ಪಟ್ಟಿತು ಎಂದು ಟೀಕಿಸಿದರು.

ಲೋಕಸಭೆಯಲ್ಲಿ 'ವಂದೇ ಮಾತರಂ' ಕುರಿತ ಚರ್ಚೆಗೆ ಸೋಮವಾರ 10 ಗಂಟೆ ಮೀಸಲಿಡಲಾಗಿತ್ತು. ಚರ್ಚೆಯನ್ನು ಪ್ರಾರಂಭಿಸಿದ ಮೋದಿ, ವಂದೇ ಮಾತರಂ ಬ್ರಿಟಿಷ್ ದಬ್ಬಾಳಿಕೆಯ ಹೊರತಾಗಿಯೂ ಬಂಡೆಯಂತೆ ನಿಂತು ಏಕತೆಗೆ ಪ್ರೇರಣೆ ನೀಡಿತು ಎಂದು ಗಮನ ಸೆಳೆದರು. ಈಗ ವಂದೇ ಮಾತರಂನ ಶ್ರೇಷ್ಠತೆಯನ್ನು ಪುನಃಸ್ಥಾಪಿಸಲು ನಮಗೆ ಅವಕಾಶವಿದೆ ಮತ್ತು ಈ ಅವಕಾಶವನ್ನು ಕಳೆದುಹೋಗಲು ಬಿಡಬಾರದು ಎಂದು ನಾನು ನಂಬುತ್ತೇನೆ

ಪುಟ 2ಕ್ಕೆ

### ಚರ್ಚೆಯ ಅಗತ್ಯವೇನು?: ಪ್ರಿಯಾಂಕಾ ಗಾಂಧಿ ಕಿಡಿ

**ನವದೆಹಲಿ:** 'ವಂದೇ ಮಾತರಂ' ಗೀತೆಯ ಕುರಿತು ದೇಶಕ್ಕೆ ಸ್ವಾತಂತ್ರ್ಯ ಬಂದ 79 ವರ್ಷಗಳ ನಂತರ ಚರ್ಚೆಯ ಅಗತ್ಯವೇನಿತ್ತು? ಎಂದು ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಕಿಡಿಕಾರಿದರು.

ಲೋಕಸಭೆಯಲ್ಲಿ 'ವಂದೇ ಮಾತರಂ' ಕುರಿತ ಚರ್ಚೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಗುರಿಯಾಗಿಸಿದ ಅವರು ಕೇಂದ್ರ ಸರ್ಕಾರದ ವಿರುದ್ಧ ಕಿಡಿಕಾರಿದರು. ದೇಶದಲ್ಲಿ ಚರ್ಚಿಸಲು ಅನೇಕ ಮಹತ್ವದ ವಿಷಯಗಳಿರುವಾಗ ಸದನವು ರಾಷ್ಟ್ರೀಯ ಗೀತೆಯ ಬಗ್ಗೆ ಏಕೆ ಚರ್ಚೆ ನಡೆಸುತ್ತಿದೆ ಎಂದು ಪ್ರಶ್ನಿಸಿದರು. ಈ ಹಾಡು ಜನರ ಹೃದಯದಲ್ಲಿ ಸ್ಥಾನ ಪಡೆದಿದೆ ಹಾಗಾದರೆ ಚರ್ಚೆಯ ಅಗತ್ಯವೇನು? ಎಂದು ಪ್ರಶ್ನಿಸಿದರು.

## ಡಿ.12ಕ್ಕೆ ಕಿಡ್ಸ್ ಕಾರ್ನಿವಲ್



ಮೈಸೂರು: ಹೆರಿಟೇಜ್ ರೌಂಡ್ ಟೇಬಲ್ 109ರ ವತಿಯಿಂದ ಡಿ.12ರ ಬೆಳಗ್ಗೆ 9ರಿಂದ ಮಧ್ಯಾಹ್ನ 1 ರವರೆಗೆ ನಗರದ ಕುವೆಂಪುನಗರದಲ್ಲಿನ ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪದಲ್ಲಿ ಬುದ್ಧಿಮಾಂದ್ಯ ಮಕ್ಕಳಿಗಾಗಿ ಕಿಡ್ಸ್ ಕಾರ್ನಿವಲ್ ಆಯೋಜಿಸಲಾಗಿದೆ ಎಂದು ಪದಾಧಿಕಾರಿ ಹರೀಶ್ ಶೆಣೈ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಇದು ಯಾವುದೇ ಸ್ಪರ್ಧೆಯಾಗಿರುವುದಿಲ್ಲ, ಬದಲಾಗಿ ಅಂತಹ ಮಕ್ಕಳು ಇಲ್ಲಿಗೆ ಆಗಮಿಸಿ, ಶಿಕ್ಷಕರು, ಪೋಷಕರೊಡನೆ ಹಬ್ಬದ ವಾತಾವರಣದಲ್ಲಿ ಸಂಭ್ರಮಿಸಲಿದಾರೆ. ಇವರಿಂದ ಯಾವುದೇ ಶುಲ್ಕ ಪಡೆಯುವುದಿಲ್ಲ. ಈ ಮಕ್ಕಳನ್ನು ಪಾಪ್‌ಕಾರ್ನ್, ಕಾಟನ್ ಕ್ಯಾಂಡಿ, ಚಾಕೊಲೇಟ್ ಫೌಂಟೇನ್, ಪೇಸ್ಟ್ರಿ ಮೊದಲಾದವುಗಳೊಡನೆ ಸ್ವಾಗತಿಸಲಾಗುವುದು. ಸುಮಾರು 800 ಮಂದಿ ಇದರಲ್ಲಿ ಪಾಲ್ಗೊಳ್ಳುವ ನಿರೀಕ್ಷೆಯಿದೆ. ಮನವಿ ಸಲ್ಲಿಸಿದ ಶಾಲೆಗಳಿಗೆ ಮಕ್ಕಳನ್ನು ಕರೆತರಲು ಹಾಗೂ ವಾಪಸಾಗಲು ವಾಹನ ವ್ಯವಸ್ಥೆ ಸಹಾ ಇರಲಿದೆ ಎಂದು ಮಾಹಿತಿ ನೀಡಿದರು. ವಿನಾಯಕ್, ರಜತ್, ಸೂರಜ್, ಕುಶಾಲ್ ಇದ್ದರು.

## ಡಿ.21ರಂದು ಕಿಡ್ಸ್ ಅಥ್ಲೆಟಿಕ್ ಚಾಂಪಿಯನ್‌ಶಿಪ್ ಪಂದ್ಯಾವಳಿ



ಮೈಸೂರು: ಸಂಸದರ ಕ್ರೀಡಾ ಮಹೋತ್ಸವ ಅಂಗವಾಗಿ ಡಿ.21ರಂದು ಬೆಳಗ್ಗೆ 8ಕ್ಕೆ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ವಿವಿಧ ವಯೋಮಾನದ ಮಕ್ಕಳಿಗೆ ಕಿಡ್ಸ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್ ಪಂದ್ಯಾವಳಿ ಆಯೋಜಿಸಲಾಗಿದೆ ಎಂದು ಕಲಿಸು ಸಂಸ್ಥೆಯ ಸಂಸ್ಥಾಪಕ ನಿಖಿಲೇಶ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, 4 ರಿಂದ 6 ವರ್ಷದೊಳಗಿನವರಿಗೆ 40 ಮೀಟರ್ ಓಟ, ಚೆಂಡು ಎಸೆತ, 7 ರಿಂದ 9 ವರ್ಷದೊಳಗಿನವರಿಗೆ 60 ಮೀಟರ್ ಓಟ, ಚೆಂಡು ಎಸೆತ, ಜಿಗಿತ, 10 ರಿಂದ 12 ವರ್ಷ ವಯಸ್ಸಿನವರಿಗೆ 80 ಮೀಟರ್ ಓಟ, ಜಾವೆಲಿನ್, ದೂರ ಜಿಗಿತ,100 ಮೀಟರ್ ರಿಲೇ, 13 ರಿಂದ 15 ವರ್ಷದೊಳಗಿನವರಿಗೆ 100 ಮೀಟರ್ ಓಟ, 600 ಮೀಟರ್ ಓಟ, ದೂರ ಜಿಗಿತ, ಶಾಟ್‌ಪುಟ್, 100 ಮೀಟರ್ ರಿಲೇ, 16 ರಿಂದ 18 ವರ್ಷದೊಳಗಿನವರಿಗೆ 100 ಮೀಟರ್ ಓಟ, 400 ಮೀಟರ್ ಓಟ, 1000 ಮೀಟರ್ ಓಟ, ದೂರ ಜಿಗಿತ, ಶಾಟ್ ಪುಟ್, 100 ಮೀಟರ್ ರಿಲೇ ಇರಲಿದೆ. ಪ್ರವೇಶ ಶುಲ್ಕ 299 ರೂ.,, ಸರ್ಕಾರಿ ಶಾಲೆ ಮಕ್ಕಳಿಗೆ ಉಚಿತವಿದೆ. ಎಲ್ಲ ವಿಜೇತರಿಗೆ ನಗದು ಬಹುಮಾನ, ಟ್ರೋಫಿ, ಗಿಫ್ಟ್ ವೋಚರ್, ತಿಂಡಿ ತಿನಿಸು ಇರಲಿದೆ ಎಂದು ಮಾಹಿತಿ ನೀಡಿದರು. ರೋಟರಿ ಹೆರಿಟೇಜ್ ಅಧ್ಯಕ್ಷ ಎಂ.ಎಸ್. ರಾಜು, ಮಂಜುನಾಥ್, ಸಾಗರ್, ಬಾಲಸುಬ್ರಹ್ಮಣ್ಯ ಇದ್ದರು.

# ರಾಜ್ಯದಲ್ಲಿ ಎಂ.ಇ.ಎಸ್. ನಿಷೇಧಕ್ಕೆ ವಾಟಾಳ್ ಆಗ್ರಹ

ರಾಮನಗರ: ರಾಜ್ಯದಲ್ಲಿ ಮಹಾರಾಷ್ಟ್ರ ಏಕೀಕರಣ ಸಮಿತಿಯನ್ನು (ಎಂ.ಇ.ಎಸ್) ನಿಷೇಧಿಸುವ ಬೆಳಗಾವಿ ಅಧಿವೇಶನದಲ್ಲಿ ಸರ್ಕಾರ ನಿರ್ಣಯ ಕೈಗೊಳ್ಳಬೇಕು. ನಿಷೇಧಕ್ಕೆ ಆಗ್ರಹಿಸಿ ಬೆಳಗಾವಿಯ ಸುವರ್ಣ ಸೌಧದ ಎದುರು ಏಕಾಂಗಿಯಾಗಿ ಪ್ರತಿಭಟನೆ ಮಾಡುತ್ತೇನೆ ಎಂದು ಕನ್ನಡ ಚಳವಳಿ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜ್ ತಿಳಿಸಿದರು.

ನಗರದ ಐಜೂರು ವೃತ್ತದಲ್ಲಿ ಎಂ.ಇ.ಎಸ್ ನಿಷೇಧಿಸುವಮತೆ ಒತ್ತಾಯಿಸಿ ನಡೆಸದಿ ಪ್ರತಿಭಟನೆಯ ವೇಳೆ ಅವರು ಮಾತನಾಡಿದರು. ಮಹರಾಷ್ಟ್ರ ಏಕೀಕರಣ ಸಮಿತಿಯನ್ನು ರಾಜ್ಯ ಸರ್ಕಾರ ತಕ್ಷಣ ನಿಷೇಧ ಮಾಡಬೇಕು. ಎಂ.ಇ.ಎಸ್ ಬೆಂಬಲಿಗರನ್ನು ರಾಜ್ಯದಿಂದ ಗಡಿಪಾರು ಮಾಡಬೇಕು. ಎಂ.ಇ.ಎಸ್‌ಗೆ ಕರ್ನಾಟಕದಲ್ಲಿ ಏನು ಕೆಲಸ. ಆ ಸಂಘಟನೆಗೂ ನಮಗೂ ಸಂಬಂಧವಿಲ್ಲ. ಎಂ.ಇ.ಎಸ್ ವಿಚಾರದಲ್ಲಿ ರಾಜ್ಯದಲ್ಲಿರುವ ಸರ್ಕಾರಕ್ಕೆ ಕಿವಿ, ಮೂಗು, ಬಾಯಿ ಇಲ್ಲ ಎಂದು ಕಿಡಿಕಾರಿದರು.

ಎಂ.ಇ.ಎಸ್ ನಿಷೇಧ ಮಾಡುವಂತೆ ಒತ್ತಾಯಿಸಿ ತಮ್ಮ ಹೋರಾಟ ಬೆಳಗೌಅಇಯಲ್ಲಿ ನಡೆಯಲಿದೆ. ಆ ಸಂಘಟನೆ ರಾಜ್ಯದಲ್ಲಿ ನಿಷೇಧವಾಗಲೇ ಬೇಕು ಎಂದು ಒತ್ತಾಯಿಸಿದರು.




### ಇಂಡಿಗೋ ವಿಮಾನ: ವಿಮಾನಯಾನ ಸಚಿವಾಲಯ ಇದೆಯೇ?

ಇಂಡಿಗೋ ವಿಮಾನಗಳು ರದ್ದಾಗಿ, ಪ್ರಯಾಣಿಕರನ್ನು ಸಂಕಷ್ಟಕ್ಕೆ ದೂಡಿದ ಪ್ರಕರಣವನ್ನು ಪ್ರಸ್ತಾಪಿಸಿದ ಅವರು ಇಂಡಿಗೋ ತನ್ನ ಗ್ರಾಹಕರ ಪ್ರಯಾಣಕ್ಕೆ ಪರ್ಯಾಯವಾಗಿ ವ್ಯವಸ್ಥೆ ಮಾಡಿಕೊಂಡಿಲ್ಲ, ದೇಶದಲ್ಲಿ ವಿಮಾನಯಾನ ಸಚಿವಾಲಯ ಇದೆಯೊ ಇಲ್ಲವೋ ಗೊತ್ತಾಗುತ್ತಿಲ್ಲ, ಇಷ್ಟೆಲ್ಲ ಸಮಸ್ಯೆ ಎದುರಾಗಿದ್ದರೂ ಪ್ರಧಾನಮಂತ್ರಿ ನರೇಂದ್ರ ಮೋದಿ ಆಗಲಿ, ವಿಮಾನಯಾನ ಸಚಿವರಾಗಲಿ ಸಮಸ್ಯೆ ಸರಿಪಡಿಸಲು ಮುಂದಾಗಿಲ್ಲ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಪ್ರಧಾನ ಮಂತ್ರಿಗಳು ತಕ್ಷಣ ಮಧ್ಯಪ್ರವೇಶಿಸಿ ಸಮಸ್ಯೆ ಬಗೆಹರಿಸಬೇಕು ಅದು ಸಾಧ್ಯವಾಗದಿದ್ದರೆ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಹೊಗಲಿ ಎಂದು ಗುಡುಗಿದರು. ಸಮಸ್ಯೆ ಸರಿಪಡಿಸುವಂತೆ ಒತ್ತಾಯಿಸಿ ಮಂಗಳವಾರ ಮಧ್ಯಾಹ್ನ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಮುತ್ತಿಗೆ ಹಾಕಲಾಗುವುದಾಗಿ ತಿಳಿಸಿದರು.

ಪ್ರತಿಭಟನೆಯ ವೇಳೆ ರಾಜ್ಯ ಉಪಾಧ್ಯಕ್ಷ ಎಂ. ಜಗದೀಶ್ ಐಜೂರು, ರಾಜ್ಯ ಉಸ್ತುವಾರಿ ಅಧ್ಯಕ್ಷ ಗಂಗಾಧರ್ ವಿ.ಎನ್, ಜಿಲ್ಲಾಧ್ಯಕ್ಷ ಸಿ.ಎಸ್ ಜಯಕುಮಾರ್, ಜಿಲ್ಲಾ ಮಹಿಳಾ ಅಧ್ಯಕ್ಷೆ ಲಕ್ಷ್ಮಿ, ತಾಲೂಕು ಮಹಿಳಾ ಅಧ್ಯಕ್ಷರಾದ ಭಾಗ್ಯ ಸುಧಾ, ಜಿಲ್ಲಾ ದಲಿತ ಘಟಕದ ಅಧ್ಯಕ್ಷ ಜಯರಾಮು, ತಾಲೂಕು ಉಪಾಧ್ಯಕ್ಷ ವಿಜಯಕುಮಾರ್, ತಾಲೂಕು ಕಾರ್ಯಾಧ್ಯಕ್ಷ ಕುಮಾರ್, ನಗರ ಘಟಕದ ಅಧ್ಯಕ್ಷ ಪ್ರಸನ್ನ, ತಾಲೂಕು ಕಾರ್ಯದರ್ಶಿ ಶಿವಮೂರ್ತಿ, ತಾಲೂಕು ಗೌರವಾಧ್ಯಕ್ಷ ಕೆಂಪರಾಜು, ತಾಲೂಕು ಸಹ ಕಾರ್ಯದರ್ಶಿ ಕೊತ್ತೀಪುರ ಸುರೇಶ್, ಯುವ ಘಟಕದ ಅಧ್ಯಕ್ಷ ಹೇಮಂತ್, ನಾರಾಯಣಸ್ವಾಮಿ, ಪಾರ್ಥಸಾರಥಿ, ಅಂಬುಜಾಕ್ಷಿ, ಮಹದೇವ್ ಇನ್ನಿತರರು ಭಾಗವಹಿಸಿದ್ದರು.

### ಸಚಿವೆ ಹೆಬ್ಬಾಳ್ಕರ್ ವಿರುದ್ಧ ಕಿಡಿ

**ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಅವರು ಬೆಳಗಾವಿಯನ್ನು ವಿಭಜನೆ ಮಾಡಬೇಕು ಎಂಬರ್ಥದಲ್ಲಿ ಮಾತನಾಡಿದ್ದಾರೆ. ಅವರು ತಕ್ಷಣ ತಮ್ಮ ಮಾತನ್ನು ವಾಪಸ್ಸು ಪಡೆಯಬೇಕು ಎಂದು ವಾಟಾಳ್ ನಾಗರಾಜ್ ಎಚ್ಚರಿಸಿದರು. ಲಕ್ಷ್ಮಿ ಹೆಬ್ಬಾಳ್ಕರ್ ಅವರು ತಮ್ಮ ಮಾತಿನ ಮೇಲೆ ನಿಗಾ ಇಡಬೇಕು, ಬೆಳಗಾವಿಯನ್ನು ಎರಡು ಭಾಗ ಮಾಡಿ ಮಹಾರಾಷ್ಟ್ರಕ್ಕೆ ಸೇರ್ಪಡೆ ಮಾಡಲು ಅವಕಾಶ ಮಾಡಿಕೊಡಲು ಹೊರಟಿದ್ದೀರಾ? ಎಂದು ಪ್ರಶ್ನಿಸಿದ ವಾಟಾಳ್, ಅಖಂಡ ಬೆಳಗಾವಿ ಒಂದೇ ಆಗಿರಬೇಕು, ವಿಭಜನೆ ಮಾತನಾಡಿದರೆ ಉಗ್ರ ಹೋರಾಟ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಕನ್ನಡಿಗರು ಶಾಂತಿಪ್ರಿಯರು, ನಮ್ಮನ್ನು ಕೆಣಕಬೇಡಿ, ಪದೇ ಪದೇ ಕ್ಯಾತೆ ತೆಗೆಯಲು ಪ್ರಯತ್ನಿಸುತ್ತಿದ್ದೀರಿ, ಕನ್ನಡ ನೆಲದ ಒಂದಿಂಚೂ ಭೂಮಿ ನಿಮಗೆ ಸಿಗುವುದಿಲ್ಲ, ಎಂಇಎಸ್ ಪುಂಡಾಟಿಕೆ ನಮ್ಮಲ್ಲಿ ನಡೆಯುವುದಿಲ್ಲ, ಮೊದಲು ಬೆಳಗಾವಿಯಿಂದ ತೊಲಗಿ ಇಲ್ಲವಾದಲ್ಲಿ ಕನ್ನಡಿಗರು ಶಕ್ತಿ ಪ್ರದರ್ಶನ ಮಾಡಬೇಕಾಗುತ್ತದೆ ಎಂದು ಎಂಇಎಸ್‌ಗೆ ಎಚ್ಚರಿಸಿದರು.**

# ಸಫಾರಿ ಆರಂಭಿಸದಂತೆ ರೈತ ಸಂಘ ಆಗ್ರಹ

ಮೈಸೂರು: ಸಫಾರಿ ಸ್ಥಗಿತಗೊಂಡ ಮೇಲೆ ಬಂಡೀಪುರ ಹಾಗೂ ನಾಗರಹೊಳೆ ಕಾಡಂಚಿನ ಗ್ರಾಮಗಳಲ್ಲಿ ಮಾನವ ಹಾಗೂ ಪ್ರಾಣಿ ಸಂಘರ್ಷ ಕಡಿಮೆಯಾಗಿದೆ. ಜೊತೆಗೆ ಜಾನುವಾರುಗಳ ಮೇಲೆ ಕಾಡು ಪ್ರಾಣಿಗಳ ದಾಳಿ ಕಡಿಮೆಯಾಗಿದೆ. ಆದ್ದರಿಂದ ಶಾಶ್ವತವಾಗಿ ಸಫಾರಿ ಬಂದ್ ಮಾಡಬೇಕು. ಜೊತೆಗೆ ಅಕ್ರಮ ರೆಸಾರ್ಟ್ ಗಳನ್ನು ತೆರವು ಮಾಡಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘ ರೈತ ಪರ್ವ ಆಗ್ರಹಿಸಿದೆ

ಈ ಕುರಿತು ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಕರ್ನಾಟಕ ರಾಜ್ಯ ರೈತ ಸಂಘ ರೈತ ಪರ್ವ ರಾಜ್ಯಾಧ್ಯಕ್ಷ ಅರುಣ್ ಕುಮಾರ್, ಪ್ರವಾಸೋದ್ಯಮ ಅಭಿವೃದ್ಧಿ ಹೆಸರಿನಲ್ಲಿ ಸಫಾರಿ ಪುನಃ ಆರಂಭಿಸುವ ಪ್ರಯತ್ನಗಳು ನಡೆಯುತ್ತಿದ್ದು, ಈ ಬಗ್ಗೆ ಸ್ಥಳೀಯರ ವಿರೋಧವಿದೆ. ಸರ್ಕಾರ ಯಾವುದೇ ಕಾರಣಕ್ಕೂ ಸಫಾರಿಯನ್ನು ಮತ್ತೆ ಪ್ರಾರಂಭಿಸಬಾರದು. ವನ್ಯಜೀವಿ– ಮಾನವ ಸಂಘರ್ಷ ತಡೆಗಟ್ಟುವ ನಿಟ್ಟಿನಲ್ಲಿ ಸರಗೂರು, ಎಚ್.ಡಿ. ಕೋಟೆ ತಾಲೂಕಿನಾದ್ಯಂತ ಇರುವ ಅಕ್ರಮ ರೆಸಾರ್ಟ್, ಹೋಂ ಸ್ಟೇಗಳನ್ನು ನೆಲಸಮಗೊಳಿಸುವುದಾಗಿ ಶಾಸಕ ಅನಿಲ್ ಚಿಕ್ಕಮಾದು ಹೇಳಿದ್ದಾರೆ. ಆದರೆ ಇದು ಕೇವಲ ಬಾಯಿ ಮಾತಾಗದೇ ಕಾರ್ಯರೂಪಕ್ಕಿಳಿಯಬೇಕೆಂದು ಒತ್ತಾಯಿಸಿದರು.

ಈ ಭಾಗದಲ್ಲಿ ಸಫಾರಿ ಬಂದ್ ಮಾಡಬೇಕೆಂದು ತಮ್ಮ ರೈತ ಸಂಘ ಹೋರಾಟ ನಡೆಸಿದ ಪರಿಣಾಮ ಸಫಾರಿ ಬಂದ್ ಆಗಿದೆ. ಆದರೆ ಈಗ ಸ್ಥಳೀಯರಿಗೆ ಉದ್ಯೋಗ ಹೋಗುತ್ತದೆ, ವ್ಯಾಪಾರ ವಹಿವಾಟು ಬಂದ್ ಆಗುತ್ತದೆ ಎಂಬ ಕಾರಣ ನೀಡಿ ಸಫಾರಿ ಪುನರಾರಂಭಿಸುವಂತೆ ಒತ್ತಾಯಿಸಲಾಗುತ್ತಿದೆ. ನಮಗೆ ಉದ್ಯೋಗ ಹೋಗುವುದು ಹೆಚ್ಚಲ್ಲ, ಬದಲಾಗಿ ಈ ಭಾಗದ ರೈತರ ಪ್ರಾಣ ಉಳಿಯಲಿ, ಕೃಷಿ ಚಟುವಟಿಕೆ ಕಾಡು ಪ್ರಾಣಿಗಳ ದಾಳಿ ಭೀತಿಯಿಲ್ಲದೇ ನಡೆಯುವಂತಾಗಲಿ ಎಂಬುದು ಮುಖ್ಯವಾಗಿದ್ದು, ಸಫಾರಿ ಯಾವುದೇ ಕಾರಣಕ್ಕು ಪುನರಾರಂಭಿಸಬಾರದು. ಈ ಭಾಗದಲ್ಲಿ ಎಗ್ಗಿಲ್ಲದೇ ತಲೆಯೆತ್ತಿರುವ ಅಕ್ರಮ ರೆಸಾರ್ಟ್, ಹೋಂ ಸ್ಟೇ, ಸಫಾರಿ ವಿರುದ್ಧ ತಮ್ಮ ರೈತ ಸಂಘ ಕಳೆದ ತಿಂಗಳ 13ರಂದು ನಗರದ ಅರಣ್ಯ ಭವನಕ್ಕೆ ಮುತ್ತಿಗೆ ಹಾಕಿತ್ತು. ಇದರ ಪರಿಣಾಮ ಸಫಾರಿ ಬಂದ್ ಆಗಿದೆ. ಆದರೆ, ಈಗಲೂ ಈ ಭಾಗದಲ್ಲಿ ಸುಮಾರು 550 ಅಕ್ರಮ ರೆಸಾರ್ಟ್, ಹೋಂ ಸ್ಟೇಗಳಿವೆ. ಇವುಗಳನ್ನು ಬಂದ್ ಮಾಡದಿದ್ದರೆ ತಮ್ಮ ಹೋರಾಟ ಮುಂದುವರಿಯಲಿದೆ ಎಂದು ಎಚ್ಚರಿಸಿದರು. ಪ್ರಧಾನ ಕಾರ್ಯದರ್ಶಿ ಡಾ. ಉಮಾಪತಿ ಮಾತನಾಡಿ, ಹುಲಿ ದಾಳಿಗಳಿಂದಾಗಿ ಹಲವಾರು ರೈತರು ಪ್ರಾಣ ಕಳೆದುಕೊಂಡ ಬಳಿಕ ಅರಣ್ಯ ಸಚಿವರು ಮಾತನಾಡಿ, ಈ ಭಾಗದ ಅಕ್ರಮ ರೆಸಾರ್ಟ್, ಹೋಂ ಸ್ಟೇಗಳ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ತಿಳಿಸಿದ್ದರು. ಹೀಗಾಗಿ ಇದುವರೆಗೆ ಎಷ್ಟು ಸಂಖ್ಯೆಯಲ್ಲಿ ಅಂತಹವನ್ನು ಬಂದ್ ಮಾಡಿಸಲಾಗಿದೆ ಎಂಬ ಮಾಹಿತಿ ಬಹಿರಂಗಗೊಳಿಸಲಿ ಎಂದು ಒತ್ತಾಯಿಸಿದರು. ರಾಜಣ್ಣ ಸಿದ್ದಲಿಂಗಪುರ, ಚಾಮರಾಜು, ಸತೀಶ್‌ಕುಮಾರ್, ಮಲ್ಲೇಶ್ ಇದ್ದರು.




# ಸಮನ್ವಯ ಸಮಿತಿ ಸಭೆ

ಗುಂಡ್ಲುಪೇಟೆ : ಡಿಸೆಂಬರ್ 21 ರಂದು ನಡೆಯಲಿರುವ ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮದ ಪ್ರಯುಕ್ತ ಇಂದು ತಾಲ್ಲೂಕು ಮಟ್ಟದ ಅಂತರ್ ಇಲಾಖೆಗಳ ಸಮನ್ವಯ ಸಮಿತಿ ಸಭೆಯನ್ನು ತಹಶೀಲ್ದಾರ್ ತನ್ಮಯ್ ಎಂ ಎಸ್ ರವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

ತಾಲ್ಲೂಕು ಆರೋಗ್ಯಾಧಿಕಾರಿಗಳಾದ ಡಾ.ಅಲಿಂ ಪಾಷಾ ಃ ಖ ಮಾತನಾಡಿ ಗುಂಡ್ಲುಪೇಟೆ ತಾಲೂಕಿನಲ್ಲಿ ಒಟ್ಟು 12,404 ( 0 ಯಿಂದ 5 ವರ್ಷದ ಮಕ್ಕಳಿಗೆ) ಮಕ್ಕಳಿಗೆ ಲಸಿಕೆಯನ್ನು ಹಾಕಿಸಲಾಗುತ್ತದೆ.

ಒಟ್ಟು 152 ಬೂತ್ ಗಳನ್ನು ರಚನೆ ಮಾಡಿದ್ದು,ಇದರಲ್ಲಿ 620 ವ್ಯಾಕ್ಸಿನೇಟರ್ ಮತ್ತು 12 ಸಂಚಾರಿ ತಂಡಗಳು, ಹಾಗೂ 06 ಣಡಿಚೆಟ್ಘಿಣ ಬೂತ್ ಗಳನ್ನು ಕಾರ್ಯಕ್ರಮದಲ್ಲಿ ರಚನೆ ಮಾಡಿ ಅವು ಕಾರ್ಯ ನಿರ್ವಹಿಸುತ್ತವೆ.ಒಟ್ಟು ನಾಲ್ಕು ದಿನಗಳ ಕಾಲ ಪಲ್ಸ್ ಪೋಲಿಯೋ ಕಾರ್ಯಕ್ರಮ ನಡೆಸಲಾಗುತ್ತದೆ ಎಂದು ಸಭೆಯಲ್ಲಿ ತಿಳಿಸಿದರು.

ತಹಶೀಲ್ದಾರ್ ರವರು, ಅಂತರ್ ಇಲಾಖೆಯ ಸಮಿತಿಯ ಎಲ್ಲಾ ಮುಖ್ಯಸ್ಥರೆಲ್ಲರೂ ಸಹಕರಿಸಿ ಮತ್ತು ಕ್ರಮವಹಿಸಬೇಕೆಂದು ತಿಳಿಸಿದರು .ಸಭೆಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಟಿ ಅರ್ ಸ್ವಾಮಿ ಸಿ ಡಿ ಪಿ ಓ ಹೇಮಾವತಿ.ವಿವಿಧ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.




## ಮೊದಲ ಪುಟದಿಂದ

### ತುರ್ತುಪರಿಸ್ಥಿತಿ 'ಕರಾಳ ಅಧ್ಯಾಯ'

ಎಂದು ಮೋದಿ ಹೇಳಿದರು.ವಂದೇ ಮಾತರಂ ಗೀತೆ ಭಾರತದ ಸ್ವಾತಂತ್ರ್ಯ ಚಳವಳಿಗೆ ಶಕ್ತಿ ತುಂಬಿತು ಮತ್ತು ಸ್ಫೂರ್ತಿ ನೀಡಿತು ಮತ್ತು ಧೈರ್ಯ ಮತ್ತು ದೃಢಸಂಕಲ್ಪದ ಹಾದಿಯನ್ನು ತೋರಿಸಿತು. ಇಂದು ಆ ಪವಿತ್ರ ವಂದೇ ಮಾತರಂ ಅನ್ನು ಈ ಸದನದಲ್ಲಿ ನಮಗೆಲ್ಲರಿಗೂ ಸ್ಮರಿಸುವುದು ಒಂದು ದೊಡ್ಡ ಸೌಭಾಗ್ಯ. ವಂದೇ ಮಾತರಂ 150 ವರ್ಷಗಳನ್ನು ಪೂರೈಸುವ ಐತಿಹಾಸಿಕ ಸಂದರ್ಭವನ್ನು ನಾವು ವೀಕ್ಷಿಸುತ್ತಿರುವುದು ನಮಗೆ ಹೆಮ್ಮೆಯ ವಿಷಯ ಎಂದು ತಿಳಿಸಿದರು.

ವಂದೇ ಮಾತರಂ ಗೀತೆಯ ಮುದ್ರಣ ಮತ್ತು ಪ್ರಸಾರವನ್ನು ತಡೆಯಲು ಕಾನೂನುಗಳನ್ನು ತಂದಿದ್ದರೂ ಸಹ, ಬ್ರಿಟಿಷರು ವಂದೇ ಮಾತರಂ ಅನ್ನು ನಿಷೇಧಿಸಲು ಒತ್ತಾಯಿಸಲಾಯಿತು. 1857ರ ದಂಗೆಯ ನಂತರ, ಬ್ರಿಟಿಷ್ ಸರ್ಕಾರವು ಎಚ್ಚೆತ್ತುಕೊಂಡಿತು ಮತ್ತು ವಿವಿಧ ರೀತಿಯ ದಬ್ಬಾಳಿಕೆ ಮಾಡುತ್ತಿದ್ದ ಸಮಯದಲ್ಲಿ 'ವಂದೇ ಮಾತರಂ' ಗೀತೆಯನ್ನು ಬರೆಯಲಾಯಿತು. ಬ್ರಿಟಿಷ್ ರಾಷ್ಟ್ರಗೀತೆ 'ಗಾಡ್ ಸೇವ್ ದಿ ಕ್ವೀನ್' ಅನ್ನು ಪ್ರತಿ ಮನೆಯಲ್ಲೂ ಹೇರುವ ಅಭಿಯಾನ ನಡೆಯುತ್ತಿತ್ತು ಎಂದು ಮೋದಿ ಹೇಳಿದರು.

'ವಂದೇ ಮಾತರಂಮೂಲಕ, ಬಂಕಿಮ ಚಂದ್ರ ಚಟ್ಟೋಪಾಧ್ಯಾಯ ಅವರು ಈ ಸವಾಲಿಗೆ ಹೆಚ್ಚಿನ ಶಕ್ತಿ ಮತ್ತು ದೃಢಸಂಕಲ್ಪದಿಂದ ಪ್ರತಿಕ್ರಿಯಿಸಿದರು. ಬ್ರಿಟಿಷರು 1905ರಲ್ಲಿ ಬಂಗಾಳವನ್ನು ವಿಭಜಿಸಿದರು. ಆದರೆ, ವಂದೇ ಮಾತರಂ ಬಂಡೆಯಂತೆ ನಿಂತು ಏಕತೆಗೆ ಪ್ರೇರಣೆ ನೀಡಿತು ಎಂದು ಅವರು ಮೋದಿ ಹೇಳಿದರು.

### ಖುದ್ದು ಹಾಜರಿಗೆ ಆದೇಶ

ಹಾಗೂ ಉಪಮುಖ್ಯಮಂತ್ರಿ ಆಗಿರುವ ಡಿ.ಕೆ.ಶಿವಕುಮಾರ್ ಅವರು ಗ್ಯಾರಂಟಿ ಘೋಷ ಣೆಯ ಪ್ರಮುಖ ರೂವಾರಿಗಳು. ಗ್ಯಾರಂಟಿ ಗಳನ್ನ ಘೋಷಣೆ ಮಾಡಿ ತೆರಿಗೆ ದುಡ್ಡಲ್ಲಿ ಜನರಿಗೆ ಭಾಗ್ಯಗಳನ್ನ ಕೊಡುತ್ತಿದ್ದಾರೆ ಎಂದು ಹೈಕೋರ್ಟ್ನಲ್ಲಿ ಎಲೆಕ್ಷನ್ ಪಿಟಿಷನ್ ಸಲ್ಲಿಕೆ ಮಾಡಿದ್ದೆವು ಎಂದು ತಿಳಿಸಿದರು. ವಿಚಾರಣೆ ನಡೆಸಿದ ಹೈಕೋರ್ಟ್ ನ್ಯಾಯಮೂರ್ತಿಗಳು ಪಿಟಿಷನ್ ವಜಾ ಮಾಡಿದ್ದರು. ಸುಪ್ರೀಂ ಕೋರ್ಟ್ ನಲ್ಲಿ ಮನವಿ ಸಲ್ಲಿಸಿದ್ದು, 2 ವಾರದಲ್ಲಿ ಮುಖ್ಯಮಂತ್ರಿಗಳು ಸುಪ್ರೀಂ ಕೋರ್ಟ್ಗೆ ಹಾಜರಾಗಬೇಕಿದೆ ಎಂದು ಹೇಳಿದರು.

### ಸಿಎಂ ಆಗುವ ಪರಿಸ್ಥಿತಿ ಬರಲ್ಲ

ವೈಯುಕ್ತಿಕ. ಸಿದ್ದರಾಮಯ್ಯನವರು ಹೈಕಮಾಂಡ್‌ಗೆ ಹೆದರಿಸುವಂತ ಹದ್ದು, ಹೈಕಮಾಂಡ್ ಸಿದ್ದರಾಮಯ್ಯನವರನ್ನು ಕೈಬಿಡುವುದಾಗಲಿ ಮಾಡಲ್ಲ. ಪರಮೇಶ್ವರ್ ಅವರನ್ನ ದಲಿತರು ಎನ್ನುವ ಕಾರಣಕ್ಕೆ ಪರಿಗಣಿಸಬೇಕಿಲ್ಲ. 2013ರಲ್ಲಿ ಅಧ್ಯಕ್ಷರಾಗಿ ಪರಮೇಶ್ವರ್ ಪಕ್ಷ ಗೆಲ್ಲಿಸಿದ್ದಾರೆ. ಅವರ ಕೊಡುಗೆಯೂ ಅಷ್ಟೇ ಇದೆ ಎಂದರು.

ರಾಜಣ್ಣ ಯಾವ ಪಕ್ಷದಲ್ಲಿದ್ದಾರೆ ಎಂಬುದನ್ನು ಹೇಳಲಿ ಎಂಬ ಶಾಸಕ ಬಾಲಕೃಷ್ಣ ಹೇಳಿಕೆಯ ಬಗ್ಗೆ ಪ್ರತಿಕ್ರಿಯಿಸಿ, ನಾನು ಯಾವನಿಂದಲೂ ಕಲಿಯಬೇಕಾಗಿಲ್ಲ. ನಾನು ಕಾಂಗ್ರೆಸ್ ಪಕ್ಷದಲ್ಲಿ 15 ವರ್ಷದಿಂದ ಇದ್ದೇನೆ ಎಂದು ತಿರುಗೇಟು ನೀಡಿದರು.

### ನಟಿ ಅತ್ಯಾಚಾರ ಪ್ರಕರಣ: ನಟ ದಿಲೀಪ್ ಖುಲಾಸೆ

ಘೋಷಿಸಿದರು. ಶಿಕ್ಷೆಯ ಪ್ರಮಾಣವನ್ನು ಶುಕ್ರವಾರ, ಡಿಸೆಂಬರ್ 12, 2025 ರಂದು ಪ್ರಕಟಿಸಲಾಗುವುದು ಎಂದು ತಿಳಿಸಿದೆ. ಎಂಟನೇ ಆರೋಪಿ ದಿಲೀಪ್ ವಿರುದ್ಧದ ಕ್ರಿಮಿನಲ್ ಪಿತೂರಿ ಆರೋಪವನ್ನು (ಸೆಕ್ಷನ್ 120 ಬಿ) ಸಾಬೀತುಪಡಿಸಲು ಪ್ರಾಸಿಕ್ಯೂಷನ್ ವಿಫಲವಾಗಿದೆ ಎಂದು ನ್ಯಾಯಾಲಯ ಹೇಳಿದೆ.


ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

### ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್: ಬಣ್ಣನೆ

# ಹರಿಶಂಕರ್ ಭಾಷೆಗಳ ನಡುವಿನ ಸಂಪರ್ಕ ರಾಯಭಾರಿ

ಮೈಸೂರು: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿವೃತ್ತ ಪ್ರಾಧ್ಯಾಪಕ, ಸಾಹಿತಿ ಎಚ್.ಎಸ್. ಹರಿಶಂಕರ್ ಕನ್ನಡದ ಕೃತಿಗಳನ್ನು ರಷ್ಯನ್‌ಗೆ, ರಷ್ಯನ್ ಕೃತಿಗಳನ್ನು ಕನ್ನಡಕ್ಕೆ ಅನುವಾದ ಮಾಡುವ ಮೂಲಕ ಈ ಎರಡು ಭಾಷೆಗಳ ನಡವಿನ ರಾಯಭಾರಿಯಂತೆ ಕೆಲಸ ಮಾಡು ತ್ತಿದ್ದಾರೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಬಣ್ಣಿಸಿದರು.

ಎಚ್.ಎಸ್.ಹರಿಶಂಕರ್‌ಅವರನ್ನು 86ನೇ ವರ್ಷದ ಜನ್ಮದಿನದ ಅಂಗವಾಗಿ ಕುವೆಂಪುನಗರ ಅನಿಕೇತನ ರಸ್ತೆಯ ಐದನೇ ಕ್ರಾಸಿನ ಸ್ವಗೃಹದಲ್ಲಿ ಹೊಯ್ಸಳ ಕನ್ನಡ ಸಂಘ ಹಾಗೂ ಸವಿಗನ್ನಡ ಬಳಗದ ಪರವಾಗಿ ಸೋಮವಾರ ಅಭಿನಂದಿಸಿ ಮಾತನಾಡಿದ ಅವರು, ಹರಿಶಂ ಕರ್ ಅವರು ರಷ್ಯಾದಲ್ಲಿ ಕೂಡ ಕೆಲವು ವರ್ಷಗಳ ಕಾಲ ವಾಸವಿದ್ದು, ಅಲ್ಲಿನ ಬಾನುಲಿ ಕೇಂದ್ರದಲ್ಲಿ ಕೆಲಸ ಮಾಡಿದ್ದಾರೆ. ಹರಿಶಂಕರ್ ಬಳಿ ಹಲವು ರಷ್ಯಯನ್ನರು ಕನ್ನಡ ಕಲಿಯುತ್ತಿದ್ದಾರೆ. ಪ್ರಸ್ತುತ ಗಾಲಿನಾ ಕೂಡ ಕನ್ನಡ ಕಲಿಯುತ್ತಿದ್ದಾರೆ.



ಅಲ್ಲದೇ ಬಸವಣ್ಣನವರ ವಚನಗ ಳನ್ನು ಕನ್ನಡ–ಇಂಗ್ಲಿಷ್– ರಷ್ಯನ್ ಭಾಷೆಗೆ ಅನುವಾದಿ ಸುತ್ತಿದ್ದಾರೆ ಎಂದು ಅವರು ಮೆಚ್ಚುಗೆ ಸೂಚಿಸಿದರು.

ಪ್ರೊ.ಎಚ್.ಎಸ್. ಹರಿಶಂಕರ್ ಅವರ ತಂದೆ ಪ್ರೊ. ಎಚ್.ಎಂ. ಶಂಕರನಾರಾಯಣ ರಾವ್ ಪ್ರಕಾಶಕರಾಗಿ ಹಲವಾರು ಹಿರಿಯ ಸಾಹಿತಿಗಳ ಕೃತಿಗಳನ್ನು ತಮ್ಮ ಶಾರದಾಮಂದಿರ ಪ್ರಕಾಶನದ ಮೂಲಕ ಪ್ರಕಟ ಮಾಡಿದ್ದಾರೆ. ಅಲ್ಲದೇ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಮೊದಲ ಅಧ್ಯಕ್ಷರಾಗಿ ಕನ್ನಡ ಕಟ್ಟುವ ಕೆಲಸ ಮಾಡಿದ್ದಾರೆ ಎಂದರು. ಪ್ರೊ.ಎಚ್.ಎಸ್.ಹರಿಶಂಕರ್ ಮಾತ ನಾಡಿ, ಸನ್ಮಾನಕ್ಕೆ ಕೃತಜ್ಞತೆ ಸಲ್ಲಿಸಿದರು. ಸಹೋದರ ಪ್ರೊ. ಎಚ್.ಎಸ್.ಗೋಪಿನಾಥ್ ತಮ್ಮ ನೆನಪುಗಳನ್ನು ಹಂಚಿಕೊಂಡರು. ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಅವರನ್ನು ಇದೇ ಸಂದರ್ಭದಲ್ಲಿ ಬಳಗದ ವತಿಯಿಂದ ಸನ್ಮಾನಿಸಲಾಯಿತು. ಇಳೈ ಆಳ್ವಾರ್ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ವ್ಯಂಗ್ಯಚಿತ್ರಕಾರ ಶ್ರೀಧರ್ ಹರಿಶಂಕರ್ ಅವರ ವ್ಯಂಗ್ಯಚಿತ್ರವನ್ನು ಸಮರ್ಪಿಸಿದರು. ವಿಜ್ಞಾನ ಲೇಖಕ ಎಸ್.ರಾಮಪ್ರಸಾದ್, ಕನ್ನಡ ಸಾಹಿತ್ಯ ಕಲಾ ಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಕವಯತ್ರಿಯರಾದ ಮಂಗಳಾ ಮುದ್ದುಮಾದಪ್ಪ, ಬಿ.ಕೆ.ಮೀನಾಕ್ಷಿ, ಸೌಗಂಧಿಕಾ ಜೋಯಿಸ್, ಪ್ರಭಾಶಾಸ್ತ್ರಿ ಜ್ಯೋಶುಲ, ಶಾಸನತಜ್ಞ ಎಚ್.ಎಂ.ನಾಗರಾಜ ರಾವ್, ಭವಿಷ್ಯನಿಧಿ ನಿವೃತ್ತ ಆಯುಕ್ತ ರಾಜಗೋಪಾಲಚಾರ್, ಸಮ್ಮುದಯ ಶೋತೃ ಬಳಗದ ಕಣ್ಣೂರು ಗೋವಿಂದಚಾರಿ, ರಷ್ಯಾದ ಡಾ.ಗಾಲಿನ ಕೋಚರಿಯೇವಿಷ್ವ. ಡಾ.ದಿವ್ಯಾ, ಕನ್ನಡ ಚಳವಳಿಗಾರ ಮೂಗೂರು ನಂಜುಂಡಸ್ವಾಮಿ, ಡಾ.ಅನುಸೂಯ, ಡಾ.ಎಚ್. ಆರ್.ಶ್ರೀಪಾದ್, ಹೊಯ್ಸಳ ಕನ್ನಡ ಸಂಘ ಹಾಗೂ ಸವಿಗನ್ನಡ ಬಳಗದ ಪರವಾಗಿ ರಂಗನಾಥ್ ಮೈಸೂರು, ಕೀರ್ತಿ, ವೆಂಕಟೇಶ್, ಮಂಜುನಾಥ್, ರೂಪಾ, ಮೂರ್ತಿ ಮೊದಲಾದವರು ಇದ್ದರು.

## ಮೊದಲ ಪುಟದಿಂದ

### ಕನ್ನಡ ಮಾಧ್ಯಮ ಶಾಲೆ ಮುಚ್ಚಲ್ಲ

ಮಗುವೂ ಶಾಲೆಯಲ್ಲಿರಬೇಕು ಮತ್ತು ಚೆನ್ನಾಗಿ ಕಲಿಯಬೇಕು ಎಂಬ ಮಹತ್ತರ ಉದ್ದೇಶದಿಂದ ರಾಜ್ಯದ ಎಲ್ಲಾ ಕರ್ನಾಟಕ ಪಬ್ಲಿಕ್ ಶಾಲೆಗಳು ಏಕರೂಪದ ನೀತಿಯನ್ನು ಪಾಲಿಸುವಂತೆ ಕರ್ನಾಟಕ ಪಬ್ಲಿಕ್ ಶಾಲಾ ಮಾನಕಗಳು ಕೈಪಿಡಿಯನ್ನು ಸಿದ್ಧಪಡಿಸಲಾಗಿದೆ. ಅದರಲ್ಲಿ ನಿಗದಿಪಡಿಸಿರುವ ಗುಣಮಟ್ಟದ ಮಾನದಂಡಗಳಂತೆ ಪ್ರತಿ ಶಾಲೆಯಲ್ಲಿ ಕನಿಷ್ಠ 1,200 ವಿದ್ಯಾರ್ಥಿಗಳಿಗೆ ಅವಶ್ಯಕವಿರುವ ಸಮರ್ಪಕ ಶೈಕ್ಷಣಿಕ ಮತ್ತು ಭೌತಿಕ ಸೌಕರ್ಯಗಳನ್ನು ಒದಗಿಸಿ ಉನ್ನತೀಕರಿಸಲಾಗುವುದು ಎಂದು ಹೇಳಿದರು.

### ಮೆಕ್ಕೆಜೋಳಕ್ಕೆ ಬೆಂಬಲ ಬೆಲೆ ಕೇಂದ್ರದ ಕೆಲಸ: ಚೆಲುವರಾಯಸ್ವಾಮಿ

ವೆಚ್ಚವನ್ನು ಕೂಡ ಸರ್ಕಾರ ಬರಿಸಲಿದೆ ಎಂದು ಹೇಳಿದರು.

ನಾನು ಕೂಡ ಸಚಿವ ಸ್ಥಾನದ ಪ್ರಬಲ ಆಕಾಂಕ್ಷಿ. ಮುಂಚೂಣಿ ಸ್ಪರ್ಧೆಯಲ್ಲಿದ್ದೇನೆ' ಎಂದು ಸರ್ಕಾರದ ಮುಖ್ಯ ಸಚೇತಕ ಅಶೋಕ ಪಟ್ಟಣ ಹೇಳಿದರು. ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯಕ್ಕೆ ಬೇಡಿಕೆ ವಿಚಾರಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಅವರು, ರಾಜು ಕಾಗೆ ಅವರದು ವೈಯಕ್ತಿಕ ಹೇಳಿಕೆ. ನಾನು ಪ್ರತಿಕ್ರಿಯಿಸುವುದಿಲ್ಲ. ಆದರೆ, ನಮಗೆ ಏನು ಬೇಕು ಎಂಬ ಬೇಡಿಕೆ ಮಂಡಿಸುತ್ತೇವೆ ಎಂದರು.

### 11–12ರಂದು ಅಹವಾಲು ಸ್ವೀಕಾರ

ರಾಮನಗರ, : ಬೆಂಗಳೂರು ದಕ್ಷಿಣ ಜಿಲ್ಲಾ ಲೋಕಾಯುಕ್ತ ಠಾಣಾ ಪೊಲೀಸ್ ಅಧಿಕಾರಿಗಳು ಡಿ.11 ರಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಹಾಗೂ ಡಿ. 12 ರಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಬೆಂಗಳೂರು ದಕ್ಷಿಣ ಜಿಲ್ಲೆಯ ಕನಕಪುರ ಟೌನಿನಲ್ಲಿರುವ ತಹಶೀಲ್ದಾರ್ ರವರ ಕಚೇರಿ ಸಭಾಂಗಣದಲ್ಲಿ ಕನಕಪುರ ತಾಲ್ಲೂಕು ವ್ಯಾಪ್ತಿಯ ಸಾರ್ವಜನಿಕರಿಂದ ಕುಂದುಕೊರತೆಗಳ ಅಹವಾಲುಗಳನ್ನು ಸ್ವೀಕರಿಸಲಿದ್ದಾರೆ.ಅಂದು ಕನಕಪುರ ತಾಲ್ಲೂಕು ವ್ಯಾಪ್ತಿಯ ಸಾರ್ವಜನಿಕರು ತಮ್ಮ ಲಿಖಿತ ದೂರು ಮತ್ತು ಸಂಬಂಧಿಸಿದ ದಾಖಲಾತಿ/ಗುರುತಿನ ಚೀಟಿಯ ದ್ವಿಪ್ರತಿಯೊಂದಿಗೆ ಹಾಜರಾಗುವಂತೆ ಕರ್ನಾಟಕ ಲೋಕಾಯುಕ್ತ ಪೊಲೀಸ್ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಜನವರಿಯಿಂದಲೇ ಕಿಟ್

ಸಿಗೋ ವ್ಯವಸ್ಥೆ ಮಾಡ್ತೀವಿ. ಎಸ್‌ಐಟಿ ರಚನೆ ಅವಶ್ಯತೆ ಇಲ್ಲ. ಇರುವ ಕಾನೂನಿನಲ್ಲಿ ಅಕ್ರಮ ತಡೆಗೆ ಕ್ರಮವಹಿಸುತ್ತೇವೆ. ಅಕ್ರಮದ ಬಗ್ಗೆ ಸಿರಿಯಸ್ ಆಕ್ಷನ್ ಆಗ್ತಿದೆ. ಸರ್ಕಾರ ಸರಿಯಾಗಿ ಕೆಲಸ ಮಾಡ್ತಿದೆ ಎಂದು ತಿಳಿಸಿದರು.

ಸಚಿವ ಪ್ರಿಯಾಂಕ್ ಖರ್ಗೆ ಮಾತನಾಡಿ, ಯಾದಗಿರಿ ಅಕ್ರಮದ ಕೇಸ್ ಸಿಐಡಿಗೆ ಕೊಡಲಾಗಿದೆ. ಅದರಲ್ಲಿ ಎ1, ಎ2 ಯಾರು ಅಂತ ನೋಡಲಿ ಎಂದು ಸಿಟಿ ರವಿಗೆ ಟಾಂಗ್ ಕೊಟ್ಟರು. ಪ್ರಿಯಾಂಕ್ ಖರ್ಗೆ ಮಾತಾಡಿದ್ದಕ್ಕೆ ಭೋಜೇಗೌಡ ಅಸಮಾಧಾನ ವ್ಯಕ್ತಪಡಿಸಿದರು. ಸಚಿವರು ಉತ್ತರ ಕೊಡುವಾಗ ಬೇರೆಯವರು ಯಾಕೆ ಮಾತಾಡಬೇಕು ಎಂದರು. ಮತ್ತೆ ಮಾತಾಡಿದ ಪ್ರಿಯಾಂಕ್ ಖರ್ಗೆ, ಯಾದಗಿರಿಯಲ್ಲಿ ಎ1, ಎ2, ಎ3 ಬಿಜೆಪಿ ಪದಾಧಿಕಾರಿಗಳು ಎಂದರು. ಈ ಸಂದರ್ಭದಲ್ಲಿ ಎರಡು ಪಕ್ಷಗಳ ನಡುವೆ ಸದನದಲ್ಲಿ ಗದ್ದಲ ಉಂಟಾಯಿತು.

### ನಾಯಕತ್ವ ಬದಲಿಗೆ ನಕಾರ'

ಬಹುಮತ ಇದೆ. ಅವರಿಗೆ ಇದು ಗೊತ್ತು. ಅನಗತ್ಯ ರಾಜಕೀಯ ಮಾಡುವ ಬದಲು ಜನರ ವಿಷಯಗಳ ಬಗ್ಗೆ ಚರ್ಚೆ ಮಾಡಲಿ. ಪ್ರತಿಪಕ್ಷವಾಗಿ ಸಮಯವನ್ನು ಸುದುಪಯೋಗ ಮಾಡಿಕೊಳ್ಳುತ್ತಾರೋ ಅಥವಾ ವ್ಯರ್ಥ ಮಾಡುತ್ತಾರೋ ಅವರೇ ನಿರ್ಧರಿಸಲಿ ಎಂದರು.

### ಸಿಎಂಗೆ ಸುಪ್ರೀಂ ನೋಟಿಸ್

ಚುನಾವಣಾ ನಿಯಮಗಳಿಗೆ ವಿರುದ್ಧವಾ ಗಿದೆ. ಈ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ ಅವರ ಆಯ್ಕೆ ಯನ್ನು ಅಸಿಂಧುಗೊಳಿಸಬೇಕೆಂದು ಎಂದು ಅರ್ಜಿಯಲ್ಲಿ ಮನವಿ ಮಾಡಿದ್ದರು. ಈ ಅರ್ಜಿಯನ್ನು ಸುಪ್ರೀಂಕೋರ್ಟ್ ನ್ಯಾ.ವಿಕ್ರಮನಾಥ ನೇತೃತ್ವದ ದ್ವಿಸದಸ್ಯ ಪೀಠ ವಿಚಾರಣೆ ಕೈಗೆತ್ತಿಕೊಂಡಿದೆ. ವಿಚಾರಣೆ ಬಳಿಕ ಸಿಎಂ ಸಿದ್ದರಾಮಯ್ಯ ಹಾಗೂ ಚುನಾವಣಾ ಆಯೋಗಕ್ಕೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದೆ.

**ಕರ್ನಾಟಕ ಸರ್ಕಾರ**
**ಕಾರ್ಯಪಾಲಕ ಅಭಿಯಂತರರವರ ಕಛೇರಿ**
**ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ,**
**ಮೈಸೂರು–570023**
**ಸಂ./ಕಾಅ/ಪಂ.ರಾ.ಇಂ.ವಿ/ಮೈ/ಇ–ಪ್ರಕ್ಯೂರ್‌ಮೆಂಟ್/ಸ.ಇಂ/ಕಿ.ಇಂ.**
**ಇ–ಪ್ರಕ್ಯೂರ್‌ಮೆಂಟ್–ಟೆಂಡರ್ ಪ್ರಕಟಣೆ ಸಂಖ್ಯೆ 17/2025–26, ದಿ:04.12.2025**

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮೈಸೂರು ರವರು ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ ಬೆಂಗಳೂರು ರವರ ಸಹಯೋಗದೊಂದಿಗೆ, ಅರ್ಹ ಸರಬರಾಜುದಾರರಿಂದ ಟೆಂಡರ್ ನಮೂನೆ ರೀತ್ಯಾ ದ್ವಿ–ಲಕೋಟೆ ಮಾದರಿಯ ಪದ್ಧತಿಯಂತೆ ಇ–ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿರುತ್ತದೆ. ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸಲು ಮತ್ತು ಭರ್ತಿ ಮಾಡಿದ ಫಾರಂಗಳನ್ನು ಆನ್ ಲೈನ್‌ನಲ್ಲಿ ಸಲ್ಲಿಸಲು ನಿಗಧಿತ ಅವಧಿ ದಿ: 05.12.2025 ರಿಂದ 22.12.2025 ಸಂಜೆ 4.00 ಘಂಟೆಯವರೆಗೆ ಹಾಗೂ ಟೆಂಡರ್ ಬಗ್ಗೆ ಸ್ಪಷ್ಟಿಕರಣ/ವಿಚಾರಿಸಿ ಮಾಹಿತಿ ಪಡೆಯಲು ಅಂತಿಮ ದಿ: 22.12.2025ರ ಸಂಜೆ 4.00 ಘಂಟೆ ಹಾಗೂ ಟೆಂಡರ್ ತೆರೆಯುವ ದಿ: 23.12.2025ರ ಸಂಜೆ 5.30 ಘಂಟೆಯ ನಂತರ.

**ಕ್ರಸಂ.1 ಕಾಮಗಾರಿ ಹೆಸರು:** ಮೈಸೂರು ನಗರದ ಜಿಲ್ಲಾ ಪಂಚಾಯತ್ ಕಛೇರಿಗೆ ಗುತ್ತಿಗೆ ಆಧಾರದ ಮೇಲೆ 04 ಜನ ಸ್ವಚ್ಛತಾ ನೌಕರರು ಹಾಗೂ 02 ಜನ ನೈರ್ಮಲ್ಯ ಸಹಾಯಕರ ಸೇವೆಯನ್ನು ಒಂದು ವರ್ಷ ಅವಧಿಗೆ ಒದಗಿಸುವ ಬಗ್ಗೆ. **ಟೆಂಡರ್‌ಗೆ ಇಡಲಾದ ಮೊತ್ತ (ರೂ.ಲಕ್ಷಗಳಲ್ಲಿ) (ಜಿಎಸ್‌ಟಿ ಸೇರಿದಂತೆ):** 13.20 **Earnest Money Deposit (in Rs):** 28,000.00

ಟೆಂಡರ್ ಫಾರಂ ಬೆಲೆ ಇ–ಪ್ರಕ್ಯೂರ್‌ಮೆಂಟ್‌ನಂತೆ ಸಲ್ಲಿಸಬೇಕು. ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (e-procurement portal) ವೆಬ್ ಸೈಟ್‌ನಲ್ಲಿ ಪಡೆಯಬಹುದು https,//kppp.karnataka.gov.in ಈ ಬಗ್ಗೆ ಇನ್ನೂ ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, (ಫೋನ್ ನಂ.0821–2560853) ರವರ ಕಛೇರಿಯ ವೇಳೆಯಲ್ಲಿ ಪಡೆಯಬಹುದು.

**ಸಹಿ/– ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ.ವಿಭಾಗ, ಮೈಸೂರು**
DIPR/DDMYS/1331/KSMCA/755/2025-26

# ಡಾ.ಬಿ.ಆರ್.ಅಂಬೇಡ್ಕರ್ ಅವರ ಕೊಡುಗೆ ಅಪಾರ: ಮಂಜುನಾಥ್



ಚಾಮರಾಜನಗರ, ಡಾ. ಬಿ.ಆರ್. ಅಂಬೇಡ್ಕರ್ ಅವರ ಕೊಡುಗೆ ಅಪಾರವಾದದ್ದು ಎಂದು ವೈದ್ಯಕೀಯ ವಿಜ್ಞಾನ ಬೋಧನಾ ಆಸ್ಪತ್ರೆ ಡೀನ್ ಹಾಗೂ ನಿರ್ದೇಶಕರಾದ ಡಾಕ್ಟರ್ ಹೆಚ್.ಜಿ ಮಂಜುನಾಥ್ ತಿಳಿಸಿದರು.

ತಾಲೂಕಿನ ಎಡಪುರದ ಎಡಬೆಟ್ಟದ ಆವರಣದಲ್ಲಿರುವ ಸಿಮ್ಸ್ ನ ವೈದ್ಯಕೀಯ ವಿಜ್ಞಾನಗಳ ಬೋಧನಾ ಆಸ್ಪತ್ರೆ ಹಾಗೂ ಜಿಲ್ಲಾ ಆಸ್ಪತ್ರೆ ವತಿಯಿಂದ ನಡೆದ ಡಾ. ಬಿ.ಆರ್. ಅಂಬೇಡ್ಕರ್ ಅವರ 69ನೇ ಪರಿನಿರ್ವಾಣ ದಿನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಡಾ.ಬಿ.ಆರ್ ಅಂಬೇಡ್ಕರ್ ಅವರು ಶಿಕ್ಷಣ, ಸಂಘಟನೆ,ಹೋರಾಟದ ಹಾದಿಯಾಗಿ ಎಲ್ಲರಿಗೂ ಉತ್ತಮ ಸಂದೇಶ ನೀಡಿದ್ದಾರೆ. ಅವರ ಕೊಡುಗೆ ಇಡೀ ವಿಶ್ವಕ್ಕೆ ಮಾದರಿಯಾಗಿದೆ. ಅವರನ್ನು ನಾವು ಕಳೆದುಕೊಂಡ ಈ ದಿನವನ್ನು ಪರಿನಿರ್ವಾಣ ದಿನವನ್ನಾಗಿ ಆಚರಿಸುತ್ತಿದ್ದೇವೆ ಆದ್ದರಿಂದ ಅವರನ್ನು ನಾವು ಎಂದೆಂದೂ ಸ್ಮರಿಸಿಕೊಳ್ಳೋಣ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಆಸ್ಪತ್ರೆಯ ಮುಖ್ಯಸ್ಥರು ಹಾಗೂ ಕೀಲು ಮತ್ತು ಮೂಳೆ ತಜ್ಞ ಡಾ, ಮಾರುತಿ,, ವೈದ್ಯಕೀಯ ನಿವಾಸಿ ಡಾ. ಯೋಗೇಶ್ ಮತ್ತು ಪ್ರಭಾರ ಜಿಲ್ಲಾ ಶಸ್ತ್ರ ಚಿಕಿತ್ಸಕ ಎಜಾಜುಲ್ಲಾ ಖಾನ್, ಡಾಕ್ಟರ್ ದೇವೇಂದ್ರ, ಡಾಕ್ಟರ್ ಶಿವಸ್ವಾಮಿ,ನರ್ಸಿಂಗ್ ಅದೀಕ್ಷಕಿ ಜಮುನಾ, ಕೃಷ್ಣಮೂರ್ತಿ, ಅಂಬುಲೆನ್ಸ್ ಡ್ರೈವರ್ ಮಹೇಶ್, ಶ್ರೀನಿವಾಸ್, ಪರಶಿವಮೂತಿ9, ಸುನಿಲ್, ಪ್ರಶಾಂತ್, ಹೇಮಂತ್ ಹಾಗೂ ಆಸ್ಪತ್ರೆಯ ಸಿಬ್ಬಂದಿ ವರ್ಗ ದವರು ಸೇರಿದಂತೆ ಇತರರು ಇದ್ದರು.

# ವಿಜೃಂಭಣೆಯ ವಿಷ್ಣು ದೀಪೋತ್ಸವ

ಚಾಮರಾಜನಗರ: ತಾಲ್ಲೂಕಿನ ಹರದನಹಳ್ಳಿ ಗ್ರಾಮದ ಹೃದಯ ಭಾಗದಲ್ಲಿರುವ ಪುರಾತನ ಐತಿಹಾಸಿಕ ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನದಲ್ಲಿ ವಿಜೃಂಭಣೆಯಿಂದ ವಿಷ್ಣು ದೀಪೋತ್ಸವ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ನಡೆಯಿತು.

ದೇವಸ್ಥಾನದಲ್ಲಿ ರೋಹಿಣಿ ನಕ್ಷತ್ರದ ಪ್ರಯುಕ್ತ ಬೆಳಿಗ್ಗೆಯಿಂದ ದೇವರಿಗೆ, ವಿಶೇಷ ಅಭಿಷೇಕ, ಪೂಜಾ ಕೈಂಕರ್ಯ ನೆರವೇರಿತು. ದೇವರಿಗೆ ವಿವಿಧ ಹೂವಿನಿಂದ ಅಲಂಕರಗೊಳಿಸಿ ದೇವಸ್ಥಾನವನ್ನು ತಳಿರು ತೋರಣಗಳಿಂದ ಶೃಂಗರಿಸಿ ಮತ್ತು ಸಂಜೆ 6-30 ರ ಗಂಟೆಯಲ್ಲಿ ವಿಷ್ಣು ದೀಪೋತ್ಸವ ನಡೆಯಿತು.

ಶ್ರೀಮನ್ನಾ ನಾರಾಯಣಸ್ವಾಮಿ ಸಮೇತ ಶ್ರೀದೇವಿ-ಭೂದೇವಿ ದೇವರ ಉತ್ಸವ ಮೂರ್ತಿಯನ್ನು ದೇವಸ್ಥಾನದ ಒಳಾಂಗಣದಲ್ಲಿ ಒಂದು ಸುತ್ತು ಪ್ರದಕ್ಷಿಣೆ ಹಾಕಲಾಯಿತು. ದೇವಸ್ಥಾನಕ್ಕೆ ಅಳವಡಿಸಿದ್ದ ಬಣ್ಣ ಬಣ್ಣದ ದೀಪಲಂಕಾರ ಹಾಗೂ ಉತ್ಸವ ಮೂರ್ತಿಯನ್ನು ನೊಡಿ ಭಕ್ತರು ಕಣ್ತುಂಬಿಕೊಂಡರು. ಗ್ರಾಮದ ಶ್ರೀಮಾತೆ ಶಾರದಾ ದೇವಿ ಭಜನಾ ಮಂಡಳಿಯ ಮಾತೆಯರು ದೇವಸ್ಥಾನದ ಆವರಣದಲ್ಲಿ ವಿವಿಧ ಬಣ್ಣಬಣ್ಣದ ರಂಗೋಲಿಯನ್ನು ಬಿಡಿಸಿ ದೇವರ ಕೃಪಗೆ ಪಾತ್ರಾದರು.



ರಸಮಂಜರಿ ಕಾರ್ಯಕ್ರಮವನ್ನು ಗಡಿನಾಡು ಜಾನಪದ ಕೋಗಿಲೆಗಳ ಸಾಂಸ್ಕೃತಿಕ ಟ್ರಸ್ಟ್, ಬೆಳಕು ಸಂಸ್ಥೆ, ಚಾಮರಾಜನಗರ ರವರ ತಂಡದಿಂದ ಸುಗಮ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು. ಗ್ರಾಮದ ಎಲ್ಲಾ ಸಮುದಾಯದ ಕೋಮುವಾರು ಯಜಮಾನರು ಗಳು, ಹಿರಿಯರು, ಮುಖಂಡರು, ಆರ್ಚಕ ವೃಂದ, ಶ್ರೀ ವಿನಾಯಕ ಭಕ್ತ ಮಂಡಳಿಯ ಸದಸ್ಯರು, ಶ್ರೀಮಾತೆ ಶಾರದಾ ದೇವಿ ಭಜನಾ ಮಂಡಳಿಯ ಮಾತೆಯರು, ಸ್ವಾಮಿ ವಿವೇಕಾನಂದ ಪಾಠ ಶಾಲೆ ಮಕ್ಕಳು, ದೇವಸ್ಥಾನದ ಭಕ್ತ ವೃಂದ, ಗ್ರಾಮಸ್ಥರು ಇತರರು ಸೇರಿದಂತೆ ಇದ್ದರು.

# ಪೊಲೀಸ್ ಅಕಾಡೆಮಿ ಸಾವಿತ್ರಿ ಬಾಯಿಫುಲೆ ನಡುವೆ ಒಡಂಬಡಿಕೆ



ಮೈಸೂರು: ಕರ್ನಾಟಕ ಪೊಲೀಸ್ ಅಕಾಡೆಮಿ ಮತ್ತು ಸಾವಿತ್ರಿಭಾಯಿ ಫುಲೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಂಸ್ಥೆ ನಡುವೆ ಒಡಂಬಡಿಕೆಗೆ ಸಹಿ ಹಾಕಲಾಯಿತು.


ಈ ಒಡಂಬಡಿಕೆಯು ಎರಡೂ ಸಂಸ್ಥೆಗಳ ನಡುವೆ ಸಂಪನ್ಮೂಲ ವ್ಯಕ್ತಿಗಳ ವಿನಿಮಯ, ಸಂಶೋಧನೆ ಮತ್ತು ಅಭಿವೃದ್ಧಿ ಹಾಗೂ ವಿಶೇಷ ಕರಸ್‌ಗಳನ್ನು ಅಭಿವೃದ್ಧಿಪಡಿಸಿ ನರವಹಿಸುವ ಕುರಿತಾಗಿದ್ದು, ಎರಡೂ ಸಂಸ್ಥೆಗಳ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಒಡಂಬಡಿಕೆಗೆ ಸಹಿ ಹಾಕಿ ಮಾತನಾಡಿದ ಕರ್ನಾಟಕ ಪೊಲೀಸ್ ಅಕಾಡೆಮಿ ನಿರ್ದೇಶ ಎಸ್.ಎಲ್.ಚೆನ್ನಬಸವಣ್ಣ, 'ಕೇಂದ್ರ ಸರ್ಕಾರದ ಪ್ರತಿಷ್ಠಿತ ಸಂಸ್ಥೆಯಾದ ಸಾವಿತ್ರಿಭಾಯಿ ಫುಲೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಂಸ್ಥೆಯೊಡನೆ ಒಡಂಬಡಿಕೆ ಕರ್ನಾಟಕ ಪೊಲೀಸ್ ಅಕಾಡೆಮಿಗೆ ಬಹಳ ವಿಶಿಷ್ಟವಾಗಿದ್ದು, ಪ್ರಸ್ತುತ ಸಮಾಜದಲ್ಲಿ ಮಹಿಳೆಯರು ಮತ್ತು ಮಕ್ಕಳು ಎದುರಿಸುತ್ತಿರುವ ಸವಾಲುಗಳು, ಅವರ ಸಮಸ್ಯೆಗಳ ನಿರ್ವಹಣೆಯಲ್ಲಿ ಪೊಲೀಸ್ ಇಲಾಖೆಯ ಪಾತ್ರ, ಅವರ ಕುರಿತಾದ ಕಾನೂನುಗಳು ಹಾಗೂ ಅವರಿಗೆ ಸಂಬಂಧಪಟ್ಟ ಪ್ರಚಲಿತ ವಿದ್ಯಮಾನಗಳ ಕುರಿತು ಪೊಲೀಸ್ ಇಲಾಖೆಗೆ ಸೇರ್ಪಡೆಯಾಗುವ ಅಧಿಕಾರಿಗಳಿಗೆ ಹಾಗೂ ಕರ್ತವ್ಯನಿರತ ಪೊಲೀಸ್ ಅಧಿಕಾರಿಗಳಿಗೆ ಮಾಹಿತಿ ನೀಡಿ ಅವರನ್ನು ಸಂವೇದನಾಶೀಲರನ್ನಾಗಿ ಮಾಡಲು ಬಹಳ ಸಹಕಾರಿಯಾಗಲಿದೆ. ಈ ಒಡಂಬಡಿಕೆಯ ಮೂಲಕ ಪ್ರಸ್ತುತ ಸಮಾಜದಲ್ಲಿ ಮಹಿಳೆಯರ ಮತ್ತು ಮಕ್ಕಳ ಮೇಲೆ ನಡೆಯುತ್ತಿರುವ ದೌರ್ಜನ್ಯದ ಪ್ರಕರಣಗಳು ಗಣನೀಯವಾಗಿ ಕಡಿಮೆಯಾಗಿ, ದೌರ್ಜನ್ಯಮುಕ್ತ ಸಮಾಜ ನಿರ್ಮಾಣವಾಗಬೇಕೆಂದರು.

ಸಾವಿತ್ರಿಭಾಯಿ ಫುಲೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಂಸ್ಥೆ ಪರವಾಗಿ ಒಡಂಬಡಿಕೆಗೆ ಸಹಿ ಹಾಕಿ ಮಾತನಾಡಿದ ಸಂಸ್ಥೆಯ ಬೆಂಗಳೂರು ಪ್ರಾದೇಶಿಕ ಕೇಂದ್ರದ ನಿರ್ದೇಶಕ ಪಿ.ಜೆ.ಫಿಲಿಪ್ಸ್, ಪ್ರತಿಷ್ಠಿತ ಸಂಸ್ಥೆ ರ?ನಾಟಕ ಪೊಲೀಸ್ ಅಕಾಡೆಮಿಯೊಡನೆ ಒಡಂಬಡಿಕೆ ನಮ್ಮ ಸಂಸ್ಥೆಗೂ ಹೆಮ್ಮೆಯ ವಿಷಯವಾಗಿದ್ದು, ರ?ನಾಟಕ ರಾಜ್ಯದಲ್ಲಿ ವರದಿಯಾಗುತ್ತಿರುವ ಮಹಿಳೆಯರ ಮತ್ತು ಮಕ್ಕಳ ದರ?ಜನ್ಯಗಳ ಸಂಖ್ಯೆಯನ್ನು ಗಣನೀಯವಾಗಿ ಕಡಿಮೆ ಮಾಡುವುದಲ್ಲದೇ, ರಾಜ್ಯವನ್ನು ದರ?ಜನ್ಯಮುಕ್ತ ಮಾಡುವಲ್ಲಿ ಪೊಲೀಸ್ ಇಲಾಖೆಯೊಂದಿಗೆ ಕೈಜೋಡಿಸುವುದು ಈ ಒಡಂಬಡಿಕೆಯ ಉದ್ದೇಶ. ಈ ಒಂದು ನಿಟ್ಟಿನಲ್ಲಿ ರಾಜ್ಯ ಪೊಲೀಸ್ ತರಬೇತಿ ಸಂಸ್ಥೆ ಹಾಗೂ ಕರ್ನಾಟಕ ಪೊಲೀಸ್ ಅಕಾಡೆಮಿ ಕ್ರಾಂತಿಕಾರಕ ಹೆಜ್ಜೆಇಟ್ಟಿದೆ ಎಂದರು.

# ಡಿ.14ರಂದು ಗ್ರೇಟರ್ ಮೈಸೂರು ಕುರಿತು ಮುಕ್ತ ಸಂವಾದ

ಮೈಸೂರು: ಗ್ರೇಟರ್ ಮೈಸೂರು ಅಥವಾ ಗ್ರೇಟರ್ ವಿಷನ್: ನಗರದ ನಿಜವಾದ ಅಗತ್ಯ ವೇನು?" ಎಂಬ ವಿಷಯದ ಮೇಲೆ ಸಾರ್ವಜನಿಕ ಸಂವಾದವನ್ನು ಡಿ.14ರ ಭಾನುವಾರ ಬೆ.10ರಿಂದ ಮ.12ರವರೆಗೆ ನಗರದ ಮೈಸೂರು ವಿಶ್ವವಿದ್ಯಾ ಲಯದ ಮಾನಸ ಗಂಗೋತ್ರಿ ಆವರಣದಲ್ಲಿರುವ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ನರರೋಗ ತಜ್ಞ ಡಾ. ಶುಶ್ರುತ ಗೌಡ ವಿ.ಆರ್.ಟ್ರಸ್ಟ್ ವತಿಯಿಂದ ಮೈಸೂರು ನಗರದ ನಾಗರಿಕ ಜಾಗೃತಿ, ಅಭಿವೃದ್ಧಿಯಲ್ಲಿ ಸಾರ್ವಜನಿಕ ಪಾಲ್ಗೊಳ್ಳುವಿಕೆ ಮತ್ತು ಸುಸ್ಥಿರ ನಗರಾಭಿವೃದ್ಧಿ ನೀಲನಕಾಶೆ ಸಿದ್ಧಪಡಿಸುವ ನೀಡುವ ಉದ್ದೇಶದಿಂದ ಈ ಮಹತ್ವದ ಸಂವಾದವನ್ನು ಆಯೋಜಿಸಲಾಗಿದೆ.



ಮೈಸೂರಿನ ದೀರ್ಘಕಾಲಿಕ ಅಭಿವೃದ್ಧಿ, ನಗರ ವಿಸ್ತರಣೆ, ಮೂಲ ಸೌಕರ್ಯ ಹಾಗೂ ಸುಸ್ಥಿರ ಬೆಳವಣಿಗೆ ಕುರಿತಾಗಿ ತಜ್ಞರು, ಆಡಳಿತಗಾರರು ಹಾಗೂ ನಾಗರಿಕರು ಈ ಸಂವಾದದಲ್ಲಿ ಪಾಲ್ಗೊಳ್ಳಲಿದ್ದಾರೆ. ನಗರಾಭಿವೃದ್ಧಿಗೆ "ಗ್ರೇಟರ್ ಮೈಸೂರು" ಮಾದರಿಯ ಭೌಗೋಳಿಕ ವಿಸ್ತರಣೆ ಅಗತ್ಯವೋ, ಅಥವಾ ಸಮಗ್ರ ದೃಷ್ಟಿಕೋನ ಮತ್ತು ದೀರ್ಘಕಾಲಿಕ ಯೋಜನೆಗಳೇ ಮುಖ್ಯವೋ ಎಂಬ ಪ್ರಶ್ನೆಗೆ ಉತ್ತರ ಹುಡುಕುವ ಉದ್ದೇಶದಿಂದ ವಿವಿಧ ಕ್ಷೇತ್ರಗಳ ಗಣ್ಯರು ಒಂದು ವೇದಿಕೆಯಲ್ಲಿ ಸಂವಾದ ನಡೆಸಲಿದ್ದಾರೆ.

ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಹುಣಸೂರು ಶಾಸಕ ಜಿ.ಡಿ.ಹರೀಶ್ ಗೌಡ, ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಮಾಜಿ ಮುಖ್ಯ ಕಾರ್ಯದರ್ಶಿ ಎ. ರವೀಂದ್ರ, ನಟ ಹಾಗೂ ಸಮಾಜಮುಖಿ ಚಿಂತಕ ಪ್ರಕಾಶ್ ಬೆಳವಡಿ, ಮೈಸೂರು ವಿವಿ ಅರ್ಥಶಾಸ್ತ್ರ ವಿಭಾಗದ ನಿವೃತ್ತ ಪ್ರೊ. ಕೆ.ಸಿ.ಬಸವರಾಜ, ಉದ್ಯಮಿ ಕಿರಣ್ ರಂಗ ಸಂವಾದದಲ್ಲಿ ಪಾಲ್ಗೊಳ್ಳಲಿದ್ದಾರೆ. ಸ್ವಾಗತ ಭಾಷಣವನ್ನು ಛಾಯಾದೇವಿ ಕಾಲೇಜ್ ಆಫ್ ಎಜುಕೇಷನ್ ಡಾ.ಆಂಥೋನಿ ಪೌಲ್ರಾಜ್, ಪ್ರಸ್ತಾವಿಕ ಭಾಷಣವನ್ನು ವಿ.ಆರ್ ಟ್ರಸ್ಟ್ ಮತ್ತು ಗೋಪಾಲಗೌಡ ಆಸ್ಪತ್ರೆ ನ್ಯೂರೋಜೋನ್ ನಿರ್ದೇಶಕ ಡಾ.ಶುಶ್ರುತಗೌಡ ಮಾಡಲಿದ್ದಾರೆ. ಕಾರ್ಯಕ್ರಮವನ್ನು ಸಿಟಿ ಹೈಲೈಟ್ಸ್ ರಾಜಕೀಯ ಬ್ಯೂರೋ ಮುಖ್ಯಸ್ಥ ಶ್ಯಾಮ್ ಸುಂದರ್ ವಟ್ಟಂ ನಿರ್ವಹಿಸಲಿದ್ದಾರೆ.

ಆಯೋಜಕ ಡಾ.ಶುಶ್ರುತ ಗೌಡ ಮಾತನಾಡಿ ನಗರ ಯೋಜನೆ, ಸಾರಿಗೆ, ಸಾರ್ವಜನಿಕ ಸೇವೆಗಳು, ಮೂಲಸೌಕರ್ಯ ವಿಸ್ತರಣೆ, ನಗರದ ಆರ್ಥಿಕ ಸಾಮರ್ಥ್ಯ ಮತ್ತು ನಾಗರಿಕರ ಪಾಲ್ಗೊಳ್ಳುವಿಕೆ ಮೊದಲಾದ ವಿಷಯಗಳಲ್ಲಿ ಮೈಸೂರಿಗೆ ಅಗತ್ಯವಾದ ದೀರ್ಘಕಾಲಿಕ ದೃಷ್ಟಿಕೋನದ ಅಭಿವೃದ್ಧಿಯ ನೀಲನಕಾಶೆಯ ಬಗ್ಗೆ ಇಲ್ಲಿ ಅರ್ಥಪೂರ್ಣ ಚರ್ಚೆ ನಡೆಯಲಿದೆ. ಮೈಸೂರಿನ ಮುಂದಿನ ದಶಕದ ಅಭಿವೃದ್ಧಿ ಮಾದರಿಯನ್ನು ರೂಪಿಸಲು ಈ ಸಂವಾದ ಉಪಯುಕ್ತವಾಗಲಿದೆ ಎಂದು ತಿಳಿಸಿದ್ದಾರೆ.

# ಶಿಕ್ಷಣದಿಂದ ಉನ್ನತ ಸ್ಥಾನ

## ಮಾಜಿ ಕೇಂದ್ರ ಸಚಿವ ದಿ.ಎಂ.ರಾಜಶೇಖರಮೂರ್ತಿ ಪುಣ್ಯಸ್ಮರಣೆ

ಚಾಮರಾಜನಗರ, ಗ್ರಾಮೀಣ ಪ್ರದೇಶದಲ್ಲಿರುವ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ದೊರೆತು ಅವರು ಉನ್ನತ ಪದವಿ ಪಡೆದುಕೊಂಡಾಗ ಮಾತ್ರ ಭಾರತ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗೆ ಸೇರಿಸಲು ಸಾಧ್ಯ ಎಂಬುದನ್ನು ದಿ. ರಾಜಶೇಖರಮೂರ್ತಿ ಅವರು ಹೊಂದಿದ್ದರು ಎಂದು ಮರಿಯಾಲ ಶ್ರೀ ಮಠಾಧ್ಯಕ್ಷರಾದ ಶ್ರೀ ಇಮ್ಮಡಿ ಮುರುಘರಾಜೇಂದ್ರ ಸ್ವಾಮೀಜಿ ತಿಳಿಸಿದರು.

ಕೇಂದ್ರ ಸಚಿವರಾಗಿದ್ದ ದಿ.ಎಂ.ರಾಜಶೇಖರ ಮೂರ್ತಿ ಅವರ 15ನೇ ವರ್ಷದ ಪುಣ್ಯಸ್ಮರಣೆಯ ಅಂಗವಾಗಿ ನಗರದ ಸಮೀಪದ ಮರಿಯಾಲದ ಶ್ರೀ ಮುರುಘರಾಜೇಂದ್ರಸ್ವಾಮಿ ವಿದ್ಯಾಸಂಸ್ಥೆ ಆವರಣದಲ್ಲಿರುವ ಅವರ ಸ್ಮಾರಕಕ್ಕೆ ಪುಷ್ಪ ನಮನ ಸಲ್ಲಿಸಿ, ಪುಣ್ಯ ಸ್ಮರಣಾ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ರಾಜಶೇಖಮೂರ್ತಿ ಅವರು ರಾಜಕಾರಣದಲ್ಲಿ ಶುದ್ಧ ಹಸ್ತರು, ರಾಜಕಾರಣದ ಜೊತೆಗೆ ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಂಡವರು. ಶಿಕ್ಷಣ ಕ್ಷೇತ್ರದ ಅಭಿವೃದ್ಧಿಯ ಬಗ್ಗೆ ತಮ್ಮದೇ ಆದ ಕನಸು ಕಟ್ಟಿಕೊಂಡಿದ್ದರು. ಹೀಗಾಗಿ ಮರಿಯಾಲದಲ್ಲಿ ಶಿಕ್ಷಣ ಸಂಸ್ಥೆಯ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಿದ್ದರು. ಅವರು ಈ ಭಾಗ ಮಕ್ಕಳಿಗೂ ಸಹ ಬೆಂಗಳೂರು ಹಾಗೂ ಮೈಸೂರಿನಲ್ಲಿ ದೊರೆಯುವಂತಹ ಗುಣಾತ್ಮಕ ಶಿಕ್ಷಣ ಸಿಗಬೇಕು. ಎಲ್ಲರು ಸಹ ದೊಡ್ಡ ಹುದ್ದೆಗಳಿಗೆ ಹೋಗಬೇಕು. ಇಂಥ ವಾತಾವರಣವನ್ನು ಕಲ್ಪಿಸುವ ನಿಟ್ಟಿನಲ್ಲಿ ರಾ.ಮೂರ್ತಿಗಳು ತಮ್ಮ ಅನುಭವವನ್ನು ಧಾರೆ ಎರೆದರು. ಜೊತೆಗೆ ಹಿರಿಯ ಶ್ರೀಗಳೊಂದಿಗೆ ಕೈಜೋಡಿಸಿ, ವಿದ್ಯಾಸಂಸ್ಥೆಯ ಬೆಳವಣ ಗೆಗೆ ಪ್ರಮುಖ ಕಾರಣ ?ಭೂತರಾಗಿದ್ದರು. ಅವರ ಸೇವೆಯನ್ನು ಸ್ಮರಿಸಿಕೊಳ್ಳುವ ಜೊತೆಗೆ ಅವರ ಆಶಯವನ್ನು ಈಡೇರಿಸುವ ನಿಟ್ಟಿನಲ್ಲಿ ನಾವೆಲ್ಲರು ಶ್ರಮಿಸೋಣ ಎಂದರು.

ದಿ. ರಾಜಶೇಖರ ಮೂರ್ತಿ ಅವರ ಪುತ್ರಿ



ಶೀಲಾ ಹರಹಳಕಟ್ಟಿ ಕಾರ್ಯಕ್ರಮವನ್ನು ಉದ್ಘಾಟಿಸಿ, ವಿದ್ಯಾರ್ಥಿಗಳಿಗೆ ಕ್ರೀಡಾ ಸಲಕರಣೆ ಮತ್ತು ಗ್ರಂಥಾಲಯಗಳಿಗೆ ಪುಸ್ತಕಗಳನ್ನು ನೀಡಿ ಮಾತನಾಡಿ, ನಮ್ಮ ತಂದೆಯವರಾದ ರಾಜಶೇಖರಮೂರ್ತಿ ಅವರು ಕೇಂದ್ರ ಮತ್ತು ರಾಜ್ಯದಲ್ಲಿ ಸಚಿವರಾಗಿ ಉತ್ತಮ ಸೇವೆ ಸಲ್ಲಿಸಿದ್ದರು. ಬಹಳಷ್ಟು ಯುವ ರಾಜಕಾರಣಗಳನ್ನು ಬೆಳೆಸಿದವರು. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಭ್ರಷ್ಟಾಚಾರ ಹಾಸು ಹೊಕ್ಕಾಗಿರುವುದನ್ನು ನೋಡಿ ತುಂಬಾ ನೊಂದಿದ್ದರು ಎಂದರು.

ವಿದ್ಯಾರ್ಥಿಗಳಾದ ನೀವು ಭ್ರಷ್ಟಾಚಾರದ ವಿರುದ್ಧವಾಗಿರಬೇಕು. ಸಂಸ್ಕಾರಯುತ ಶಿಕ್ಷಣವನ್ನು ಪಡೆದುಕೊಳ್ಳುವ ಜೊತೆಗೆ ಭ್ರಷ್ಟಚಾರ ಮುಕ್ತ ಸಮಾಜವನ್ನು ನಿರ್ಮಾಣ ಮಾಡುವ ಗುರಿ ನಿಮ್ಮದಾಗಬೇಕು. ಚಿಕ್ಕ ವಯಸ್ಸಿನಿಂದಲೇ ಸರಳತೆ ಮತ್ತು ಪ್ರಾಮಾಣ ಕತೆಯನ್ನು ರೂಡಿಸಿಕೊಂಡರೆ, ತಾವು ದೊಡ್ಡರಾಗಿ, ಉನ್ನತ ಹ?ದ್ದೆಗಳಿಗೆ ಹೋದಾಗ ಅಲ್ಲಿ ಉತ್ತಮ ಆಡಳಿತ ನೀಡಲು ಸಾಧ್ಯವಾಗುತ್ತದೆ ಎಂದರು.

ತಂದೆ ರಾಜಶೇಖರ ಮೂರ್ತಿ ಅವರ ಪರಿಶ್ರಮ ಹಾಗೂ ಹಿರಿಯಶ್ರೀಗಳ ಆರ್ಶೀವಾದದಿಂದ ಮರಿಯಾದಲ್ಲಿ ಬೃಹತ್ ಶ್ರೀ ಮುರುಘರಾಜೇಂದ್ರಸ್ವಾಮಿ ಶೈಕ್ಷಣ ಕ ಸಂಸ್ಥೆ ಆರಂಭಗೊಂಡಿದೆ. ಇಲ್ಲಿ ಮಕ್ಕಳಿಗೆ ಶಿಕ್ಷಣದ ಜೊತೆಗೆ ಸಂಸ್ಕಾರ ಹಾಗೂ ಶಿಸ್ತು ರೂಡಿಸುವ ಮೂಲಕ ರಾಜಶೇಖರಮೂರ್ತಿ ಅವರು ಕನಸು ಅವರ ಪುಣ್ಯಭೂಮಿಯಲ್ಲಿಯೇ ನೆನಸು ಮಾಡುವ ಪ್ರಯತ್ನ ನಿರಂತರವಾಗಿ ಸಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ದಿ. ರಾಜಶೇಖರಮೂರ್ತಿರವರ ಮಕ್ಕಳಾದ ಶೀಲಾ ಹರಹಳಕಟ್ಟಿ, ಸುಮ, ಶಶಿ, ಶೋಭಾ, ಕಾಳನಹುಂಡಿ ಶಿವಕುಮಾರಸ್ವಾಮಿ, ಸಂಸ್ಥೆಯ ಪ್ರಾಂಶುಪಾಲರಾದ ಮೂಡ್ನಾಕೂಡು ಮಹದೇವಸ್ವಾಮಿ, ಶಿಕ್ಷಕರ ವೃಂದದವರು ಹಾಗೂ ತಡಿಮಾಲಂಗಿ ಮತ್ತು ಮರಿಯಾಲ ಗ್ರಾಮಸ್ಥರು, ವಿದ್ಯಾಸಂಸ್ಥೆಯ ಅಧ್ಯಕ್ಷರು, ಸ'ದಸ್ಯರು, ನೌಕರರು, ವಿದ್ಯಾರ್ಥಿಗಳು, ದಿ ಎಂ. ರಾಜಶೇಖರಮೂರ್ತಿ ಅಭಿಮಾನಿಗಳು ಉಪಸ್ಥಿತರಿದ್ದರು.

# 39ನೇ ತಂಡದ ಅಬಕಾರಿ ಉಪಾಧೀಕ್ಷಕರ ತರಬೇತಿ ಸಮಾರೋಪ

ಮೈಸೂರು: ನಗರದ ಕರ್ನಾಟಕ ಪೊಲೀಸ್ ಅಕಾಡೆಮಿಯಲ್ಲಿ 39ನೇ ತಂಡದ ಅಬಕಾರಿ ಉಪಾಧೀಕ್ಷಕರ ಬುನಾದಿ ತರಬೇತಿಯ ನಿರ್ಗಮನ ಪಥಸಂಚಲನ ಮತ್ತು ತರಬೇತಿ ಮುಕ್ತಾಯದ ಪ್ರಮಾಣಪತ್ರ ವಿತರಣಾ ಕಾರ್ಯಕ್ರಮ ನಡೆ ಯಿತು. 39ನೇ ತಂಡದಲ್ಲಿ ಒಬ್ಬರು ಪ್ರಶಿಕ್ಷಣಾರ್ಥಿ ಕುಂದಾಪುರದ ದಿವ್ಯ ಕೆ ಶೆಟ್ಟಿ ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ ಪ್ರಮಾಣ ವಚನ ಬೋಧನೆ ಹಾಗೂ ಪ್ರಮಾಣಪತ್ರ ವಿತರಣೆಯನ್ನು ಮಾಡಲಾಯಿತು.

ಮುಖ್ಯ ಅತಿಥಿಯಾದ ಮೈಸೂರು ವಿಭಾಗದ ಅಬಕಾರಿ ಜಂಟಿ ಆಯುಕ ಬಸವರಾಜ ಹಡಪದ ಪ್ರಶಿಕ್ಷಣಾರ್ಥಿಯವರಿಗೆ ಪ್ರಮಾಣಪತ್ರ ವಿತರಿಸಿ ಮಾತನಾಡಿ, 'ಖಾಕಿ ಧರಿಸುವ ಸರ್ಕಾರದ ಜಾರಿ ಇಲಾಖೆಗಳ ಅಧಿಕಾರಿಗಳಿಗೆ ಪೊಲೀಸ್ ಅಕಾಡೆಮಿಯಲ್ಲಿ ತರಬೇತಿಯನ್ನು ನೀಡಲಾಗುತ್ತದೆ. ಪೊಲೀಸ್ ತರಬೇತಿ ಕೇಂದ್ರಗಳಲ್ಲಿ ತರಬೇತಿ ಪಡೆಯುವುದರಿಂದ ಶಿಸ್ತನ್ನು ಮೈಗೂಡಿಸಿಕೊಳ್ಳುವುದಲ್ಲದೇ, ಸಮಯ ನಿರ್ವಹಣೆ ಕೌಶಲ ಹಾಗೂ



ಸಮುದಾಯ ಕೇಂದ್ರಿತ ಆಲೋಚನೆ ಮೈಗೂಡಿಸಿಕೊಳ್ಳುವಲ್ಲಿ ಸಹಾಯ ಮಾಡುತ್ತದೆ. ಕರ್ನಾಟಕ ಪೊಲೀಸ್ ಅಕಾಡೆಮಿಯ ನಿರ್ದೇಶಕರ ಮಾರ್ಗದರ್ಶನ ಹಾಗೂ ಇಲ್ಲಿಯ ನುರಿತ ಅಧಿಕಾರಿಗಳಿಂದ ತರಬೇತಿ ಪಡೆದಿರುವ ಪ್ರಶಿಕ್ಷಣಾರ್ಥಿ ಶ್ರೀಮತಿ ದಿವ್ಯ ಕೆ ಶೆಟ್ಟಿ ತಮ್ಮ ವೃತ್ತಿಯಲ್ಲಿ ಉತ್ತಮ ಅಧಿಕಾರಿಯಾಗುವುದೂ ಅಲ್ಲದೇ ತಮ್ಮ ವಯಕ್ತಿಕ ಜೀವನದಲ್ಲಿ ಶ್ರೇಷ್ಠ ವ್ಯಕ್ತಿಯಾಗಿ ರೂಪುಗೊಳ್ಳುತ್ತಾರೆ' ಎಂಬ ಆಶಾಭಾವನೆಯನ್ನು ವ್ಯಕ್ತಪಡಿಸಿದರು.

ಕರ್ನಾಟಕ ಪೊಲೀಸ್ ಅಕಾಡೆಮಿಯ ನಿರ್ದೇಶಕ ಎಸ್.ಎಲ್.ಚೆನ್ನಬಸವಣ್ಣ ಮಾತನಾಡಿ, ದಿವ್ಯಾ ಕೆ.ಶೆಟ್ಟಿ ಈ ಬ್ಯಾಚಿನಲ್ಲಿ ತರಬೇತಿ ಪಡೆಯುತ್ತಿರುವ ಏಕೈಕ ಪ್ರಶಿಕ್ಷಣಾರ್ಥಿ. ಒಮ್ಮೆಯೂ ರಜಾ ಹಾಗೂ ತರಬೇತಿಯ ವಿನಾಯಿತಿ ಕೇಳಲಿಲ್ಲ. ಪೊಲೀಸ್ ಇಲಾಖೆಯ ಪ್ರಶಿಕ್ಷಣಾರ್ಥಿಗಳೊಡನೆ ಕೂಡ ತರಬೇತಿ ಪಡೆದು ಯಶಸ್ವಿಯಾಗಿ ಪೂರೈಸಿದ್ದಾರೆ. ಇಂತಹ ಬದ್ಧತೆಯ ಹಾಗೂ ಸಮರ್ಪಿತ ಮನೋಭಾವವುಳ್ಳವರದ್ದಾಗಿದೆ. ಪೊಲೀಸ್ ಇಲಾಖೆ ಅಧಿಕಾರಿಯಾಗಿದ್ದರೆ ನನಗೆ ಸಂತೋಷವಾಗುತ್ತಿತ್ತು. ಇಂತಹ ಅಧಿಕಾರಿಯನ್ನು ಪಡೆಯುತ್ತಿರುವ ಅಬಕಾರಿ ಇಲಾಖೆ ಧನ್ಯವೆಂದರು. ಕಾರ್ಯಕ್ರಮದಲ್ಲಿ ಅಬಕಾರಿ ಇಲಾಖೆಯ ಅಧಿಕಾರಿ ಮಹಾದೇವಿ ಭಾಯಿ, ಬಸವರಾಜಪ್ಪ, ವಿವೇಕ್ ಇತರರು ಹಾಜರಿದ್ದರು.

# ಸಂವಿಧಾನ ಪ್ರತಿಪಾದನೆ ಪ್ರತಿಯೊಬ್ಬರ ಕರ್ತವ್ಯ: ಅಯೂಬ್ ಖಾನ್

ಮೈಸೂರು: ಸಂವಿಧಾನ ಪಾಲನೆ ಪ್ರತಿಯೊಬ್ಬ ಭಾರತೀಯನ ಕರ್ತವ್ಯ ಎಂದು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ತಿಳಿಸಿದರು.

ದಸರಾ ವಸ್ತುಪ್ರದರ್ಶನದಲ್ಲಿ ಪ್ರಾಧಿಕಾರದ ವತಿಯಿಂದ ಹಮ್ಮಿಕೊಂಡಿದ್ದ ಸಂವಿಧಾನ ಶಿಲ್ಪಿ ಡಾ.ಬಿ.ಆರ್ ಅಂಬೇಡ್ಕರ್ ರ 69ನೇ ಪರಿನಿಬ್ಬಾಣ ದಿನ ಆಚರಣೆ ವೇಳೆ ಬಾಬಾ ಸಾಹೇಬರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿದರು. ಅಸಮಾನತೆಯ ಕತ್ತಲಲ್ಲಿ ತತ್ತರಿಸುತ್ತಿದ್ದ ಭಾರತಕ್ಕೆ ಬೆಳಕು ನೀಡಿದ ಸೂರ್ಯನನ್ನು ಕಳೆದುಕೊಂಡು ಇಡೀ ದೇಶವೇ 1956 ಡಿ.6 ಕಣ್ಣೀರು ಹರಿಸಿತ್ತು. ಇಂದು ದೇಶದಲ್ಲಿ ನ್ಯಾಯಾಂಗ, ಕಾರ್ಯಾಂಗ, ಶಾಸಕಾಂಗದ ಮೂಲಕ ಇಡೀ ಭಾರತದಲ್ಲಿ ಆಡಳಿತ ಅಭಿವೃದ್ಧಿಯ ಕಾನೂನನ್ನು ರಚಿಸಿ ದೇಶದ ಕಟ್ಟಕಡೆಯ ವ್ಯಕ್ತಿಗೆ ಸ್ವಾತಂತ್ರ್ಯ, ಸಮಾನತೆ, ರಕ್ಷಣೆ, ಹಕ್ಕುಗಳನ್ನ ನೀಡಿದ್ದು ಬಾಬಸಾಹೇಬರು ರಚಿಸಿಕೊಟ್ಟ ಸಂವಿಧಾನದಿಂದಾಗಿದೆ. ಈ ಬಗ್ಗೆ ಪ್ರತಿಯೊಬ್ಬ ಭಾರತೀಯರು ಹೆಮ್ಮೆ ಪಡಬೇಕಿದೆ ಎಂದು ತಿಳಿಸಿದರು.

ಭಾರತೀಯರ ಸ್ವಾಭಿಮಾನದ ಪ್ರತೀಕವಾದ ಸಂವಿಧಾನವನ್ನು ದೇಶಕ್ಕೆ ಅರ್ಪಿಸಿ, ಸ್ವಾತಂತ್ರ್ಯ, ಪ್ರಜಾಪ್ರಭುತ್ವ, ಸಮಾಜವಾದದ ನೆಲೆಗಟ್ಟಿನಲ್ಲಿ ಸರ್ವಧರ್ಮ ಸಮನ್ವಯ ರಾಷ್ಟ್ರ ನಿರ್ಮಾಣಕ್ಕೆ ಕೊಡುಗೆ ನೀಡಿದ ಅಂಬೇಡ್ಕರ್ ಅವರ ಪರಿನಿಬ್ಬಾಣವಾದ ದಿನದಂದು ಅವರ ಚಿಂತನೆಗಳನ್ನು ಜೀವಂತವಿರಿಸಿ, ಅವುಗಳನ್ನು ಪಾಲಿಸಿಕೊಂಡು ಮುನ್ನಡೆಯೋಣ ಎಂದು ಕರೆ ನೀಡಿದರು.

ಸಾಂಸ್ಕೃತಿಕ ಸಮಿತಿಯು ಪಿ.ಕಾಳಿಂಗರಾವ್ ಗಾನ ಮಂಟಪದಲ್ಲಿ ಆಯೋಜನೆ ಮಾಡಿದ್ದ ಸಮಾರಂಭದಲ್ಲಿ ಬಾಬಾ ಸಾಹೇಬರ ಗೀತೆಗಳ ಮೂಲಕ ಸ್ಮರಿಸಿ, ಸಂವಿಧಾನ ಪೀಠಿಕೆ ಭೋದನೆ ಮಾಡಲಾಯಿತು. ಪ್ರಾಧಿಕಾರದ ಸಿಇಒ ಕೆ.ರುದ್ರೇಶ್, ಸಾಂಸ್ಕೃತಿಕ ಸಮಿತಿ ಕಾರ್ಯಾಧ್ಯಕ್ಷ ಎಸ್.ಪ್ರಕಾಶ್, ಉಪಾಧ್ಯಕ್ಷರಾದ ರಂಗಸ್ವಾಮಿ ಪಾಪು, ಶಿವಲಿಂಗಯ್ಯ, ರಾಜೇಶ್ ಸಿ.ಗೌಡ, ರಘುರಾಜೇ ಅರಸ್, ಪದ್ಮನಾಭ್ ಗುಂಡಣ್ಣ, ನಿರೂಪಕ ಅಜಯ್ ಶಾಸ್ತ್ರಿ, ಭವ್ಯ, ಜಯಲಕ್ಷ್ಮಿ, ಚಂದ್ರಕಲಾ, ಸರಸ್ವತಿ, ಗೌರಮ್ಮ, ವರುಣಾ ಪ್ರಶಾಂತ್, ಉಮೇಶ್, ಸೈಯದ್ ಇಸ್ಮಾಯಿಲ್, ಸಮಿ ಅನ್ವರ್, ಮನ್ಸೂರ್ ಅಲಿ ಮತ್ತಿತರರು ಹಾಜರಿದ್ದರು.



# ಬೀದಿ ನಾಯಿಗಳ ದಾಳಿ ಕುರಿ ಸಾವು

ಗುಂಡ್ಲುಪೇಟೆ: ಪಟ್ಟಣದ ಹಳ್ಳದ ಕೇರಿ ಬೀದಿಯಲ್ಲಿ ಬೀದಿ ನಾಯಿಗಳು ದಾಳಿ ನಡೆಸಿದ ಪರಿಣಾಮ ಒಂದು ಕುರಿ ಸಾವಿಗೀಡಾಗಿದ್ದು ಎರಡು ಕುರಿಗಳಿಗೆ ಗಾಯವಾಗಿದ್ದು ಬಿದಿ ನಾಯಿಗಳ ಉಪಟಳಕ್ಕೆ ನಿವಾಸಿಗಳು ರೋಸಿ ಹೋಗಿದ್ದಾರೆ.

ಪಟ್ಟಣದ ಯಾಸಿನ್ ಎಂಬುವವರಿಗೆ ಸೇರಿದ ಒಂದು ಕುರಿ, ಹಾಗೂ ಮಹೇಂದ್ರ ಪ್ರಸಾದ್ ಎಂಬುವವರಿಗೆ ಸೇರಿದ ಎರಡು ಕುರಿಗಳ ಮೇಲೆ ದಾಳಿ ನಡೆಸಿದ್ದು ಯಾಸಿನ್ ಎಂಬುವವರ ಕುರಿ ಮೃತಪಟ್ಟಿದೆ ಕೂಡಲೆ ಪುರಸಭೆ ನಾಯಿಗಳ ನಿಯಂತ್ರಣ ಮಾಡುವಂತೆ ಒತ್ತಾಯಿಸಿದ್ದಾರೆ. ಗಡಿನಾಡಿ ರಕ್ಷಣೆ ಸೇನೆ ಅಧ್ಯಕ್ಷ ಮುನೀರ್ ಪಾಷ ಮಾತನಾಡಿ ಬೀದಿ ನಾಯಿಗಳ ದಾಳಿ ಹೆಚ್ಚಾಗಿದ್ದು ಈ ಹಿಂದೆ ಮಕ್ಕಳನ್ನು ಕಚ್ಚಿವೆ ಈಗ ಮೂರು ಕುರಿಗಳ ಮೇಲೆ ದಾಳಿ ನಡೆಸಿದ್ದು ಒಂದು ಕುರಿ ಸಾವಿಗೀಡಾಗಿದ್ದು ಮತ್ತೊಂದು ಕುರಿ ಸಾವಿನಂಚಿನಲ್ಲಿದೆ ಆಗಾಗಿ ಮುಂದೆ ಇಂತಹ ಘಟನೆ ನಡೆಯಬಾರದು ನಾಯಿಗಳನ್ನು ಪುರಸಭೆ ಸೆರೆ ಹಿಡಿಯಬೆಕು ಎಂದರು.



## ರಾಮೋತ್ಸವ ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ

# ರಾಮೋತ್ಸವ ಮೂಲಕ ರಾಮಚಂದ್ರರ ವೈಭವ: ಕೆ.ಶೇಷಾದ್ರಿ

ರಾಮನಗರ: ರಾಮೋತ್ಸವದ ಅಂಗವಾಗಿ ಯುವ ಜನತೆಗೆ ಹಲವಾರು ಸ್ಪರ್ಧೆಗಳನ್ನು ಆಯೋಜನೆ ಮಾಡಲಾಗುತ್ತಿದೆ. ಯುವಕ, ಯುವತಿಯರು ತಮ್ಮ ಆಸಕ್ತಿಯ ಸ್ಪರ್ಧೆಗಳಲ್ಲಿ ಭಾಗವಹಿಸಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಬೇಕು ಎಂದು ನಗರಸಭಾಧ್ಯಕ್ಷ ಕೆ.ಶೇಷಾದ್ರಿ ಕರೆ ನೀಡಿದರು.

ರಾಮೋತ್ಸವ 2025ರ ಅಂಗವಾಗಿ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಶನಿವಾರ ಟೆನ್ನಿಸ್ಬಾಲ್ ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ ನೀಡಿ ಅವರು ಮಾತನಾಡಿದರು. ಮರ್ಯಾದ ಪುರುಷ ಶ್ರೀರಾಮನ ಹೆಸರು ನಗರಕ್ಕಿದೆ. ಶ್ರೀ ರಾಮಚಂದ್ರರ ಮಹಿಮೆಯನ್ನು ಶ್ರೀ ರಾಮ ದೇವರ ಬೆಟ್ಟ ಸಾರುತ್ತಿದೆ. ರಾಮೋತ್ಸವದ ಮೂಲಕ ಶ್ರೀರಾಮನ ವೈಭವವನ್ನು ಸಂಭ್ರಮದಿಂದ ಆಚರಿಸಬೇಕೆಂದು ಶಾಸಕರಾದ ಎಚ್.ಎ.ಇಕ್ಬಾಲ್ ಹುಸೇನ್ ಮತ್ತು ಕಾಂಗ್ರೆಸ್ ಪಕ್ಷದ ಮುಖಂಡರು ತೀರ್ಮಾನ ಮಾಡಿದ್ದಾರೆ. ಅದರಂತೆ ಇಂದು ಕ್ರೀಡಾಕೂಟದ ಮೂಲಕ ಚಾಲನೆ ನೀಡಿದ್ದೇವೆ ಎಂದರು.

ಶ್ರೀ ರಾಮಚಂದ್ರ ಉತ್ತಮ ಆಡಳಿತಗಾರ.




ಮಾನವ ಸಮುದಾಯಕ್ಕೆ ಮಾದರಿಯಾದ ಜೀವನ ಸಾಗಿಸಿದ್ದು ಪುರಾಣಗಳು ತಿಳಿಸುತ್ತಿವೆ. ಅಂತಹ ಮರ್ಯಾದ ಪುರುಷೋತ್ತಮ ಹೆಸರಿನಲ್ಲಿ ರಾಮೋತ್ಸವ ಆಯೋಜನೆಯಾಗುತ್ತಿದೆ. 20ಕ್ಕು ಹೆಚ್ಚು ಸ್ಪರ್ಧೆಗಳು ವಿದ್ಯಾರ್ಥಿಗಳು ಸೇರಿದಂತೆ ಯುವ ಸಮುದಾಯ, ಮಹಿಳೆಯರು ಭಾಗವಹಿಸಲು ವೇದಿಕೆ ಕಲ್ಪಿಸಲಾಗಿದೆ. ರಾಮೋತ್ಸವದಲ್ಲಿ ಸ್ಪರ್ಧೆಗಳಲ್ಲಿ ಆಯ್ಕೆಯಾದ ವಿಜೇತರನ್ನು ಕನಕೋತ್ಸವಕ್ಕೆ ಕಳುಹಿಸಿಕೊಡಲಾಗುವುದು ಎಂದರು. ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎ.ಬಿ.ಚೇತನ್ಕುಮಾರ್ ಮಾತನಾಡಿ ರಾಮೋತ್ಸವ ಅಂಗವಾಗಿ ಕ್ರಿಕೆಟ್ ಪಂದ್ಯಾವಳಿಗೆ ಕಸಬಾ, ಕೈಲಂಚಾ ಮತ್ತು ಟೌನ್, ಹಾರೋಹಳ್ಳಿ, ಮರಳವಾಡಿಗಳಲ್ಲಿ ಏಕಕಾಲಕ್ಕೆ ಚಾಲನೆ ಸಿಕ್ಕಿದೆ. ಶಾಸಕರ ನೇತೃತ್ವದಲ್ಲಿ ಹೋಬಳಿ ಮತ್ತು ವಿಧಾನಸಭಾ ಮಟ್ಟದಲ್ಲಿ ಸ್ಪರ್ಧೆಗಳು ಯಶಸ್ವಿಯಾಗಿ ನಡೆಯಲು ಎಲ್ಲ ಸಿದ್ದತೆ ಮಾಡಿಕೊಳ್ಳಲಾಗಿದೆ.

ಕ್ರಿಕೆಟ್, ಕಬ್ಬಡಿ, ವಾಲಿಬಾಲ್, ಥ್ರೋಬಾಲ್, ಶೆಟಲ್, ಮ್ಯಾರಥಾನ್, ಬಾಡಿ ಬಿಲ್ಡ್, ಪ್ಯಾನ್ಸಿಡ್ರೆಸ್, ಡ್ರಾಯಿಂಗ್, ವಾಯ್ಸ್ ಆಫ್ ರಾಮನಗರ, ದೇಶಭಕ್ತಿ, ಜನಪದ ನೃತ್ಯ, ಸಾಂಪ್ರದಾಯಿಕ ಉಡುಗೆ, ರಂಗಗೀತೆಗಳ ಸ್ಪರ್ಧೆ, ರಂಗೋಲಿ, ಪ್ರತಿಭಾ ಪುರಸ್ಕಾರ, ಕಲ್ಯಾಣೋತ್ಸವಗಳು ವಿವಿಧ ವೇದಿಕೆಗಳಲ್ಲಿ ಅನಾವರಣಗೊಳ್ಳಲಿವೆ ಎಂದು ಮಾಹಿತಿ ನೀಡಿದರು.

ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಸಿಎನ್ಆರ್ ವೆಂಕಟೇಶ್ ಮಾತನಾಡಿದರು. ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿಯಲ್ಲಿ 27 ಕ್ರಿಕೆಟ್ ತಂಡಗಳು ಭಾಗವಹಿಸಿದ್ದವು. ಎಲ್ಲ ತಂಡದ ಆಟಗಾರರಿಗೆ ಟೀಷರ್ಟ್ ಮತ್ತು ಕಿಟ್ಗಳನ್ನು ಶಾಸಕ ಎಚ್.ಎ.ಇಕ್ಬಾಲ್ ಹುಸೇನ್ ವಿತರಿಸಿದರು. ಕ್ರಿಕೆಟ್ ಪಂದ್ಯಾವಳಿ ಸಂಚಾಲಕರಾದ ಜಿಲ್ಲಾ ಯುವ ಕಾಂಗ್ರೆಸ್ ಮಾಜಿ ಅಧ್ಯಕ್ಷ ಗುರುಪ್ರಸಾದ್, ನಗರ ಯುವ ಘಟಕದ ಅಧ್ಯಕ್ಷ ಎಂ.ಮುಷೀರ್, ಎನ್ಎಸ್ಯುಐ ಎ.ಟಿ.ಕಾರ್ತಿಕ್, ತಬ್ರೇಜ್, ರಂಜಿತ್, ನಗರಸಭೆ ಉಪಾಧ್ಯಕ್ಷೆ ಆಯಿಷಾಬಾನು, ಸದಸ್ಯರಾದ ಸೋಮಶೇಖರ್, ವಿಜಯಕುಮಾರಿ, ಗಿರಿಜಮ್ಮ, ಪವಿತ್ರ, ಜಯಲಕ್ಷ್ಮಮ್ಮ, ಅಜ್ಮದ್, ನಿಜಾಂಷರೀಫ್, ಬೈರೇಗೌಡ, ಸಮದ್, ಗೋವಿಂದರಾಜು, ಅಣ್ಣು ಮುಖಂಡ ಸುನಿಲ್ ಮತ್ತಿತರರು ಇದ್ದರು.

# ಅತಿಥಿ ಶಿಕ್ಷಕರ ಹುದ್ದೆಗೆ ಅರ್ಜಿ ಆಹ್ವಾನ

ಚಾಮರಾಜನಗರ: ತಾಲ್ಲೂಕಿನ ನಾಗವಳ್ಳಿ ಪಿಎಂಶ್ರೀ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಅತಿಥಿ ಶಿಕ್ಷಕರ ನೇಮಕಾತಿ ಮಾಡಿಕೊಳ್ಳಲಾಗುತ್ತಿದ್ದು, ಆಸಕ್ತ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಕಂಪ್ಯೂಟರ್, ಆರ್ಟ್ ಮತ್ತು ಕ್ರಾಫ್ಟ್, ನೃತ್ಯ ಮತ್ತು ಸಂಗೀತ ಹಾಗೂ ಇಂಗ್ಲೀಷ್ ವಿಷಯಕ್ಕೆ ಅತಿಥಿ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳಲಾಗುತ್ತಿದ್ದು, ಡಿ.07 ರಿಂದ ಡಿ.11ರ ವರೆಗೆ ಅರ್ಜಿ ಸಲ್ಲಿಸಬಹುದಾಗಿದೆ. ನಿಗದಿತ ವಿದ್ಯಾರ್ಹತೆ ಉಳ್ಳವರು ತಮ್ಮ ಸ್ವ ವಿವರದೊಂದಿಗೆ ನೇರವಾಗಿ ಶಾಲೆಗೆ ಭೇಟಿ ನೀಡಿ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ 8310434085, 9886824852, 9036375844 ಸಂಪರ್ಕಿಸಬಹುದೆಂದು ನಾಗವಳ್ಳಿ ಪಿಎಂಶ್ರೀ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಗುರುರತ್ನ ಶಿಕ್ಷಕ ಪ್ರಶಸ್ತಿಗೆ ಭಾಜನರಾದ ದೈಹಿಕ ಶಿಕ್ಷಕ ದೊಡ್ಡಪ್ಪಾಜಿ

ಗುಂಡ್ಲುಪೇಟೆ : ತಾಲೂಕಿನ ಹೊನ್ನಶೆಟ್ಟರಹುಂಡಿ ಗ್ರಾಮದ ರಾಜಾಚಾರಿ ರತ್ನಮ್ಮ ದಂಪತಿಗಳ ಮಗ ಶಿಕ್ಷಕ ದೊಡ್ಡಪ್ಪಾಜಿ ಅವರಿಗೆ ಪ್ರತಿಷ್ಠಿತ



ವಿಶ್ವವಿದ್ಯಾಲಯ ನೀಡುವ 2025 ರ ಗುರು ರತ್ನ ಶಿಕ್ಷಕ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ತಮಿಳುನಾಡಿನ ಚೆನ್ನೈ ಮೂಲದ ಅಮೆತ್ ವಿಶ್ವವಿದ್ಯಾಲಯದಲ್ಲಿ ನಡೆದ 2025 ರ ಗುರುರತ್ನ ಶಿಕ್ಷಕ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ದೊಡ್ಡಪ್ಪಾಜಿ ಅವರ ಕ್ರೀಡಾ ಸಾಧನೆ ಹಾಗೂ ಸಾಮಾಜಿಕ ಸೇವೆಯನ್ನ ಗುರುತಿಸಿ " ಗುರುರತ್ನ ಪ್ರಶಸ್ತಿ " ಪ್ರಮಾಣ ಪತ್ರ ಹಾಗೂ ಪದಕ ,ನಗದು ನೀಡಿ ಪುರಸ್ಕರಿಸಲಾಯಿತು. ಈ ವೇಳೆ ವಿಶ್ವವಿದ್ಯಾಲಯದ ಸಂಸ್ಥಾಪಕ ಮತ್ತು ಕುಲಪತಿಗಳಾದ ಡಾ.ಜೆ.ರಾಮಚಂದ್ರನ್, ಅದ್ಯಕ್ಷ ಡಾ.ರಾಜೇಶ್ ರಾಮಚಂದ್ರನ್ ಸೇರಿದಂತೆ ಗಣ್ಯರು ಹಾಜರಿದ್ದರು.

# ಡಿ.21ರಂದು ಕಿಡ್ಸ್ ಅಥ್ಲೆಟಿಕ್ ಚಾಂಪಿಯನ್‌ಷಿಪ್ ಪಂದ್ಯಾವಳಿ



ಮೈಸೂರು: ಸಂಸದರ ಕ್ರೀಡಾ ಮಹೋತ್ಸವ ಅಂಗವಾಗಿ ಡಿ.21ರಂದು ಬೆಳಗ್ಗೆ 8ಕ್ಕೆ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ವಿವಿಧ ವಯೋಮಾನದ ಮಕ್ಕಳಿಗೆ ಕಿಡ್ಸ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್ ಪಂದ್ಯಾವಳಿ ಆಯೋಜಿಸಲಾಗಿದೆ ಎಂದು ಕಲಿಸು ಸಂಸ್ಥೆಯ ಸಂಸ್ಥಾಪಕ ನಿಖಿಲೇಶ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, 4 ರಿಂದ 6 ವರ್ಷದೊಳಗಿನವರಿಗೆ 40 ಮೀಟರ್ ಓಟ, ಚೆಂಡು ಎಸೆತ, 7 ರಿಂದ 9 ವರ್ಷದೊಳಗಿನವರಿಗೆ 60 ಮೀಟರ್ ಓಟ, ಚೆಂಡು ಎಸೆತ, ಜಿಗಿತ, 10 ರಿಂದ 12 ವರ್ಷ ವಯಸ್ಸಿನವರಿಗೆ 80 ಮೀಟರ್ ಓಟ, ಜಾವೆಲಿನ್, ದೂರ ಜಿಗಿತ,100 ಮೀಟರ್ ರಿಲೇ, 13 ರಿಂದ 15 ವರ್ಷದೊಳಗಿನವರಿಗೆ 100 ಮೀಟರ್ ಓಟ, 600 ಮೀಟರ್ ಓಟ, ದೂರ ಜಿಗಿತ, ಶಾಟ್‌ಪುಟ್, 100 ಮೀಟರ್ ರಿಲೇ, 16 ರಿಂದ 18 ವರ್ಷದೊಳಗಿನವರಿಗೆ 100 ಮೀಟರ್ ಓಟ, 400 ಮೀಟರ್ ಓಟ, 1000 ಮೀಟರ್ ಓಟ, ದೂರ ಜಿಗಿತ, ಶಾಟ್ ಪುಟ್, 100 ಮೀಟರ್ ರಿಲೇ ಇರಲಿದೆ. ಪ್ರವೇಶ ಶುಲ್ಕ 299 ರೂ.,, ಸರ್ಕಾರಿ ಶಾಲೆ ಮಕ್ಕಳಿಗೆ ಉಚಿತವಿದೆ. ಎಲ್ಲ ವಿಜೇತರಿಗೆ ನಗದು ಬಹುಮಾನ, ಟ್ರೋಫಿ, ಗಿಫ್ಟ್ ವೋಚರ್, ತಿಂಡಿ ತಿನಿಸು ಇರಲಿದೆ ಎಂದು ಮಾಹಿತಿ ನೀಡಿದರು. ರೋಟರಿ ಹೆರಿಟೇಜ್ ಅಧ್ಯಕ್ಷ ಎಂ.ಎಸ್. ರಾಜು, ಮಂಜುನಾಥ್, ಸಾಗರ್, ಬಾಲಸುಬ್ರಹ್ಮಣ್ಯ ಇದ್ದರು.


ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

# ಪರಿನಿಬ್ಬಾಣ ದಿನ: ಅಂಬೇಡ್ಕರ್ ಅವರಿಗೆ ಗೌರವ ನಮನ

ಎಚ್.ಡಿ.ಕೋಟೆ: ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದ ಆವರಣದಲ್ಲಿ ಇರುವ ಅಂಬೇಡ್ಕರ್ ಅವರ ಪುತ್ಥಳಿಗೆ ಅಧಿಕಾರಿಗಳು ಹಾಗೂ ಮುಖಂಡರು ಮಾಲಾರ್ಪಣೆ ಮಾಡಿ, ವೇದಿಕೆ ಮೇಲೆ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಗೌರವ ನಮನ ಸಲ್ಲಿಸಿದರು.

ತಹಸಿಲ್ದಾರ್ ಶ್ರೀನಿವಾಸ್ ಮಾತಾನಾಡಿ, ಈ ದೇಶದ ಸರ್ವ ಜಾತಿ, ಜನಾಂಗ, ಧರ್ಮ, ಪಂಗಡ ಭಾಷೆಗಳನ್ನ ಸಂವಿಧಾನದ ಮೂಲಕ ಒಂದುಗೂಡಿಸಿದ ಮಹಾನ್ ಚೇತನ ಡಾ.ಬಿ.ಆರ್.ಅಂಬೇಡ್ಕರ್ ಅವರು. ಈ ದೇಶಕ್ಕೆ ಕೊಟ್ಟ ಸಂವಿಧಾನದ ಫಲವಾಗಿಯೇ ಇಂದು ಎಲ್ಲ ಜಾತಿ ಜನಾಂಗವು ತಹಸಿಲ್ದಾರ್, ಎಸಿ, ಡಿಸಿ, ಶಾಸಕ, ಸಂಸದ, ಮಂತ್ರಿ, ಮುಖ್ಯಮಂತ್ರಿ, ಪ್ರಧಾನಿ ಆಗಲು ಸಾಧ್ಯವಾಗಿದೆ. ಅದ್ದರಿಂದ, ಇಂತಹ ಮಹಾನ್ ನಾಯಕನನ್ನ ಪ್ರತಿ ನಿತ್ಯವೂ ಸ್ಮರಿಸಿಕೊಳ್ಳುವ ಜವಾಬ್ದಾರಿ ಅರಿಯಬೇಕಾಗಿದೆ ಎಂದು ತಿಳಿಸಿದರು.

ಬಿಇಒ ಸಿ.ರಾಜು ಮಾತಾನಾಡಿ, ಜಗತ್ತಿನಲ್ಲೇ ಅತ್ಯಂತ ಶ್ರೇಷ್ಠ ಸಂವಿಧಾನ ಭಾರತ ಸಂವಿಧಾನ.ಈ ಸಂವಿಧಾನದ ಕರ್ತೃ ಬಾ.ಬಾ ಸಾಹೇಬ್ ಅಂಬೇಡ್ಕರ್. ಇಂತಹ ಶ್ರೇಷ್ಠ ಸಾಧಕನನ್ನ ಇಡಿ ಜೀವ ಸಂಕುಲವೇ ನೆನೆಸಿಕೊಳ್ಳಬೇಕು ಅವರ ಕೊಡುಗೆಯಿಂದ ನಾವು ಇಂದು ಪಡೆಯುತ್ತಿರುವ ಹಕ್ಕು, ಅಧಿಕಾರಿ, ಅವಕಾಶ, ಹುದ್ದೆ, ಆಸ್ತಿ ಅಂತಸ್ತು ಗಳನ್ನ ಪಡೆಯಲು ಸಾಧ್ಯವಾಗಿದೆ. ಇಂತಹ ಮಹನೀಯ ನಿಬ್ಬಾಣ ಹೊಂದಿದ ಈ ದಿನವನ್ನ ನೆನಪಿಸಿಕೊಂಡರೆ ಕಣ್ಣೀರು ಬರುತ್ತದೆ. ನಾವು ಅವರ ಆದರ್ಶ, ತತ್ವಗಳನ್ನ ಅನುಸರಿಸಬೇಕಾಗಿದೆ ಎಂದು ಹೇಳಿದರು.



> ಇಂದು ಇಡಿ ವಿಶ್ವವೇ ಅಂಬೇಡ್ಕರ್ ಅವರನ್ನ ನೆನಪಿಸಿಕೊಳ್ಳುತ್ತದೆ. ಆದರೆ, ಭಾರತದಲ್ಲಿ ಕೆಲವೇ ಜಾತಿ, ಜನಾಂಗದವರು ಅಂಬೇಡ್ಕರ್ ಜಯಂತಿ ಆಚರಿಸಿ ಅವರನ್ನ ಇಂದು ಜಾತಿಗೆ ಸೀಮಿತ ಮಾಡಿರುವುದು ಬೇಸರದ ಸಂಗತಿ.
>
> ▸▸ **ಹೈರಿಗೆ ಶಿವರಾಜು** ತಾಲೂಕು ಅಧ್ಯಕ್ಷ, ಆದಿ ಕರ್ನಾಟಕ ಮಹಾಸಭಾ.

ಮುದ್ದುಮಲ್ಲಯ್ಯ, ಶಿವಯ್ಯ, ಎಂ. ಡಿ.ಮಂಚಯ್ಯ, ಕಾಡುಮನೆ ಪ್ರಸನ್ನ, ಕುರ್ಣೇಗಾಲ ಬೆಟ್ಟಸ್ವಾಮಿ ಸೇರಿದಂತೆ ಅನೇಕರು ಬಾ.ಬಾ ಸಾಹೇಬ್ ಅಂಬೇಡ್ಕರ್ ಅವರ ಕುರಿತಾಗಿ ಮಾತಾನಾಡಿದರು.

ಆದಿಕರ್ನಾಟಕ ಮಹಾ ಸಭಾ ಮಾಜಿ ಅಧ್ಯಕ್ಷರಾದ ಎಚ್.ಸಿ. ನರಸಿಂಹ ಮೂರ್ತಿ, ಮುಖಂಡರಾದ ಮುದ್ದು ಮಲ್ಲಯ್ಯ, ಸೋಗಹಳ್ಳಿ ಶಿವಣ್ಣ, ಜೀವಿಕ ಸಂಚಾಲಕ ಉಮೇಶ್, ಮುಖಂಡರಾದ ಜೀವಿಕ ಬಸವರಾಜು, ಚಾ.ನಂಜುಂಡ ಮೂರ್ತಿ, ಮಲಾರ ಪುಟ್ಟಯ್ಯ, ಹೈರಿಗೆ ಮಲ್ಲೇಶ್, ಪರಶಿವ ಮೂರ್ತಿ, ಶಿವಯ್ಯ, ಸೌಮ್ಯ ಮಂಜುನಾಥ್, ಅನುಷ, ನಂಜಪ್ಪ, ಪ್ರೇಮ್ ಸಾಗರ್, ಪುಟ್ಟಮಾದು, ಕುಮಾರ್, ಸದಾಶಿವ, ಸಣ್ಣ ಕುಮಾರ್, ಇಒ ಧರಣೇಶ್, ಟಿಎಚ್‌ಒ ಡಾ ರವಿಕುಮಾರ್, ಬಿಇಒ ರಾಜು, ಅಬಕಾರಿ ನಿರೀಕ್ಷಕ ಶಿವರಾಜ್, ಬೆಟ್ಟಸ್ವಾಮಿ, ಚಂದ್ರಶೇಖರ ಮೂರ್ತಿ, ನಟರಾಜ್, ತೇಜು ಗುರುಮಲ್ಲು, ಚಲುವರಾಜ್, ನೆನಪು ರವಿ ಸೇರಿದಂತೆ ಅಧಿಕಾರಿಗಳು ಭಾಗವಹಿಸಿದ್ದರು.

### ಉದ್ಯಮಿ ಕಿಡ್ನಾಪ್

# ಏಳು ತಾಸಿನಲ್ಲಿ ಐವರ ಬಂಧನ

## ವಿಜಯನಗರ ಪೊಲೀಸರಿಂದ ಸಿನಿಮೀಯ ರೀತಿಯಲ್ಲಿ ಆರೋಪಿಗಳ ಪತ್ತೆ

ಮೈಸೂರು: ಒಂದು ಕೋಟಿ ರೂ. ಹಣಕ್ಕಾಗಿ ರಿಯಲ್ ಎಸ್ಟೇಟ್ ಹಾಗೂ ಲೇವಾದೇವಿ ಉದ್ಯಮಿ ಕಣ್ಣಿಗೆ ಖಾರದ ಪುಡಿ ಎರಚಿ ಹಲ್ಲೆ ನಡೆಸುವ ಮೂಲಕ ಅಪಹರಿಸಿದ್ದ ಐವರನ್ನು ಮಿಂಚಿನ ಕಾರ್ಯಾಚರಣೆ ನಡೆಸಿ ಸಿನಿಮಯ ರೀತಿಯಲ್ಲಿ ಬಂಧಿಸುವಲ್ಲಿ ಮೈಸೂರಿನ ವಿಜಯನಗರ ಠಾಣೆ ಪೊಲೀಸರು ಯಶಸ್ವಿಯಾಗಿದ್ದಾರೆ.

ಕೃತ್ಯ ನಡೆದ ಏಳು ಗಂಟೆಯ ಅವಧಿಯಲ್ಲಿಯೇ ಉದ್ಯಮಿಯನ್ನು ಅಪಹರಿಸಿದ್ದ ಐವರನ್ನು ಬಂಧಿಸಿ ಪೊಲೀಸರು ಜೈಲಿಗಟ್ಟಿದ್ದು, ಕೃತ್ಯಕ್ಕೆ ಬಳಸಿದ್ದ ವಾಹನವನ್ನು ವಶಪಡಿಸಿಕೊಂಡಿದ್ದಾರೆ. ಅಪಹರಣ ಕೃತ್ಯಕ್ಕೆ ಪರಿಚಿತನೇ ಮಾಸ್ಟರ್ ಮೈಂಡ್ ಎಂಬುದು ತನಿಖೆ ವೇಳೆ ತಿಳಿದು ಬಂದಿದೆ. ಮೂಲತಃ ಬೆಳವಾಡಿ ಗ್ರಾಮದವರಾದ ಹಾಲಿ ವಿಜಯನಗರ ನಾಲ್ಕನೇ ಹಂತದ ನಿವಾಸಿ ಉದ್ಯಮಿ ಲೋಕೇಶ್ ಅವರನ್ನು ಪೊಲೀಸರು ರಕ್ಷಣೆ ಮಾಡಿದ್ದಾರೆ. ಅದೇ ಬೆಳವಾಡಿ ಗ್ರಾಮದ ಅಪಹರಣಕಾರರಾದ ಹೆಚ್.ಎಂ.ಸಂತೋಷ್, ಹೆಚ್.ಎಸ್.ಅಭಿಷೇಕ್, ಆರ್. ಪ್ರಜ್ವಲ್, ಬಿ.ಎನ್. ದರ್ಶನ್, ಪ್ರೀತಮ್ ಬಂಧಿತರಾ ಗಿದ್ದು, ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

**ಘಟನೆ ಹಿನ್ನಲೆ**

ಬೆಳವಾಡಿ ಗ್ರಾಮದ ಸಂತೋಷ್ ಪೇಂಟರ್ ಕೆಲಸ ಮಾಡಿಕೊಂಡಿದ್ದು, ಉದ್ಯಮಿ ಲೋಕೇಶ್‌ಗೆ ಪರಿಚಿತನಾಗಿದ್ದ, ಈತನ ಹಣಕಾಸು ವ್ಯವಹಾರದ ಬಗ್ಗೆ ಮಾಹಿತಿ ತಿಳಿದಿದ್ದನು. ಈತನನ್ನು ಅಪಹರಿಸಿದರೆ ಹಣ ಗಳಿಸಬಹುದು ಎಂಬ ಕೆಟ್ಟ ಆಲೋಚನೆಯಿಂದ ಸಂಚು ರೂಪಿಸಿದ್ದಾನೆ ಎನ್ನಲಾಗಿದೆ. ಇದಕ್ಕೆ ಆತನ ಸ್ನೇಹಿತರು ಸಾಥ್ ನೀಡಿ ಅಪಹರಣಕ್ಕಾಗಿ ಕಾರೊಂದನ್ನು ವ್ಯವಸ್ಥೆ ಮಾಡಿಕೊಂಡಿದ್ದರು. ನಿತ್ಯ ಲೋಕೇಶ್‌ನ ಚಲನವಲನದ ಮೇಲೆ ನಿಗಾ ಇರಿಸಿದ್ದ ಸಂತೋಷ್ ಮತ್ತು ತಂಡದವರು







ಶನಿವಾರ ಸಂಜೆ ವಿಜಯನಗರದ ಬಳಿಯ ಕ್ಲಬ್‌ನಿಂದ ಲೋಕೇಶ್ ಬೈಕಿನಲ್ಲಿ ಮನೆಗೆ ತೆರಳುತ್ತಿದ್ದಾಗ ಹಿಂಬಾಲಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಈ ವೇಳೆ ಲೋಕೇಶ್ ಬೈಕ್ ನಿಲ್ಲಿಸಿ ಮೊಬೈಲ್‌ನಲ್ಲಿ ಮಾತನಾಡುತ್ತಿದ್ದಾಗ ಹಿಂದಿನಿಂದ ದಾಳಿ ನಡೆಸಿದ ದುಷ್ಕರ್ಮಿಗಳು, ಆತನ ಕಣ್ಣಿಗೆ ಖಾರದ ಪುಡಿ ಹಲ್ಲೆ ನಡೆಸುವ ಮೂಲಕ ಕಾರಿನಲ್ಲಿ ಕೂರಿಸಿಕೊಂಡು ಪರಾರಿಯಾಗಿದ್ದಾರೆ. ಈ ವೇಳೆ ಬೈಕ್ ಅನ್ನು ಅಲ್ಲಿಯೇ ಬಿಟ್ಟು ತೆರಳಿದ್ದಾರೆ. ಕ್ಲಬ್ ಬಗ್ಗೆ ನಡೆದ ಗಲಾಟೆಯ ಬಗ್ಗೆ ಸ್ಥಳೀಯರು ಪೊಲೀಸರಿಗೆ ಮಾಹಿತಿ ನೀಡಿದ್ದರು. ತಕ್ಷಣ ಸ್ಥಳಕ್ಕೆ ಆಗಮಿಸಿದ ಪೊಲೀಸರು, ಅಪಹರಣಕ್ಕೆ ಒಳಗಾದ ವ್ಯಕ್ತಿ ಯಾರು ಎಂಬುದನ್ನು ಪತ್ತೆ ಹಚ್ಚಲು ಶೋಧ ಕಾರ್ಯ ನಡೆಸಿದ್ದರು. ಅಷ್ಟರಲ್ಲಿ ಲೋಕೇಶ್ ಅವರ ಪತ್ನಿಯು ಸಹ ಲೋಕೇಶ್ ಅವರಿಗೆ ಕರೆ ಮಾಡಿದ್ದು, ಮೊಬೈಲ್ ಸ್ವಿಚ್ ಆಫ್ ಆಗಿದ್ದ ಕಾರಣ ಸ್ನೇಹಿತರಿಗೆಲ್ಲಾ ಕರೆ ಮಾಡಿ ಬಳಿಕ ಕ್ಲಬ್‌ನ ಬಳಿ ಬಂದಿದ್ದರು.

ಕ್ಲಬ್‌ನ ಬಳಿ ಬೈಕ್ ಇರುವುದನ್ನು ಕಂಡು ಪೊಲೀಸರಿಗೂ ಮಾಹಿತಿ ನೀಡಿ ಅಪಹರಣಕ್ಕೆ ಒಳಗಾಗಿದ್ದು ಲೋಕೇಶ್ ಎಂದು ಮಾಹಿತಿ ನೀಡಿದ್ದರು. ತಕ್ಷಣ ಇನ್ಸ್‌ಪೆಕ್ಟರ್ ಡಿ.ಸುರೇಶ್ ಕುಮಾರ್ ಮತ್ತು ಸಿಬ್ಬಂದಿ ಅಪಹರಣಕಾರರ ಬಂಧನಕ್ಕೆ ನಾಲ್ಕು ತಂಡ ರಚಿಸಿ ಕಾರ್ಯ ಪ್ರವೃತ್ತರಾಗುತ್ತಾರೆ. ಈ ವೇಳೆ ಅಪಹರಣಕಾರ ಪ್ರಜ್ವಲ್ ಎಂಬಾತ ಲೋಕೇಶ್ ಅವರ ಪತ್ನಿಗೆ ಕರೆ ಮಾಡಿ 1ಕೋಟಿ ರೂಪಾಯಿ ನೀಡುವಂತೆ ಬೇಡಿಕೆ ಇಡುತ್ತಾನೆ. ಕೊನೆಗೆ ಅಷ್ಟು ಹಣ ನೀಡಲು ಸಾಧ್ಯವಿಲ್ಲ ಎಂದು ಹೇಳಿ 30 ಲಕ್ಷ ರೂ. ನೀಡಲು ಒಪ್ಪಿಗೆಯಾಗುತ್ತದೆ. ಹಣ ತರಲು ನಾಲ್ವರೊಂದಿಗೆ ಲೋಕೇಶ್‌ನನ್ನು ಕಾರಿನಲ್ಲಿ ಇರಿಸಿ ಮೈಸೂರಿನ ಕಡೆ ಬರುತ್ತಿದ್ದಂತೆ ಲೋಕೇಶ್ ರನ್ನು ಕೆ.ಆರ್. ನಗರದ ಹಂಪಾಪುರದ ಬಳಿ ಇರಿಸಿಕೊಂಡಿರುವುದನ್ನು ಪತ್ತೆ ಹಚ್ಚಿದ ಪೊಲೀಸರು ಕಾರ್ಯಾಚರಣೆ ನಡೆಸಿ ನಾಲ್ವರನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಇತ್ತ ಹಣ ವಸೂಲಿಗೆ ಬಂದಿದ್ದ ಪ್ರಜ್ವಲ್‌ನನ್ನು ಕೂಡ ಇಲ್ಲಿ ಮತ್ತೊಂದು ತಂಡ ಬಂಧಿಸುವಲ್ಲಿ ಯಶಸ್ವಿಯಾಗಿದೆ. ಕೃತ್ಯ ನಡೆದ ಏಳು ಗಂಟೆಯೊಳಗೆ ಅಪಹರಣಕಾರನ್ನು ಬಂಧಿಸಿ ಹೆಡೆಮುರಿ ಕಟ್ಟಿದ ಪೊಲೀಸರು, ಉದ್ಯಮಿಯನ್ನು ಸುರಕ್ಷಿತವಾಗಿ ಮನೆ ಸೇರುವಂತೆ ಮಾಡಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಲೋಕೇಶ್ ನೀಡಿದ ದೂರಿನ ಮೇರೆಗೆ ವಿಜಯ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಅಪಹರಣ ಪತ್ತೆ ಕಾರ್ಯಾಚರಣೆಯಲ್ಲಿ ವಿಜಯನಗರ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಎಸ್.ಡಿ.ಸುರೇಶ್ ಕುಮಾರ್, ಎಸ್‌ಐಗಳಾದ ಎಂ.ಜೈ.ಕೀರ್ತಿ, ಆನಂದ್ ಹಾಗೂ ಸಿಬ್ಬಂದಿಗಳಾದ ಶಂಕರ್, ವೆಂಕಟೇಶ್, ಸುನೀಲ್, ಗಂಗಾಧರ್, ಲಿಖಿತ್, ಮಂಜುನಾಥ್, ಲೋಕೇಶ್, ಚಾಲಕ ಗಿರೀಶ್ ಇದ್ದರು.

ಈ ಕುರಿತು ಮಾತನಾಡಿದ ನಗರ ಪೊಲೀಸ್ ಆಯುಕ್ತರಾದ ಸೀಮಾಲಾಟ್ಕರ್, "ಉದ್ಯಮಿ ಲೋಕೇಶ್ ರನ್ನು ಡಿ.6ರಂದು ಐವರ ತಂಡ ಅಪಹರಿಸಿ ಹಣಕ್ಕಾಗಿ ಬೇಡಿಕೆಯಿಟ್ಟಿದ್ದರು. ಕಿಡ್ನಾಪ್ ಮಾಡಿದ ಪ್ರಮುಖ ಆರೋಪಿ ಸಂತೋಷ್, ಲೋಕೇಶ್‌ಗೆ ಪರಿಚಯಸ್ಥರಾಗಿದ್ದರು. ಶನಿವಾರ ಕಿಡ್ನಾಪ್ ಮಾಡಿ, ಮೊದಲು ಒಂದು ಕೋಟಿ ರೂ. ಹಣಕ್ಕೆ ಬೇಡಿಕೆಯಿಟ್ಟಿದ್ದರು. ಬಳಿಕ 30 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದರು. ಈ ಸಂಬಂಧ ಲೋಕೇಶ್ ಪತ್ನಿ ನೀಡಿದ ಮಾಹಿತಿಯ ಆಧಾರದ ಮೇಲೆ ಐದು ಪೊಲೀಸ್ ತಂಡಗಳು ಕಾರ್ಯಾಚರಣೆ ನಡೆಸಿ, ಹಣ ಕೊಡುತ್ತೇವೆ ಎಂದು ನಂಬಿಸಿ ಐವರು ಆರೋಪಿಗಳನ್ನು ಕೆ.ಆರ್.ನಗರದ ಹಂಪಾಪುರ ಬಳಿ ಬಂಧಿಸಿ, ಉದ್ಯಮಿಯನ್ನು ರಕ್ಷಿಸಲಾಗಿದೆ. ಪ್ರಕರಣ ಸಂಬಂಧ ತನಿಖೆ ಮುಂದುವರೆದಿದೆ" ಎಂದು ತಿಳಿಸಿದರು.

# ಡಾ.ಅಂಬೇಡ್ಕರ್ ಮಹಾ ಪರಿನಿಬ್ಬಾಣ ದಿನಾಚರಣೆ

ಮೈಸೂರು: ನಗರದ ಸರಸ್ವತಿಪುರಂನಲ್ಲಿರುವ ಸಾನಿಧ್ಯ ವೃದ್ಧಾಶ್ರಮದ ಹಿರಿಯ ನಾಗರಿಕ ಬಂಧುಗಳಿಗೆ ಎಸ್.ಪ್ರಕಾಶ್ ಪ್ರಿಯಾದರ್ಶನ್ ಸ್ನೇಹ ಬಳಗದ ವತಿಯಿಂದ ಹಣ್ಣು ಹಂಪಲು ವಿತರಿಸುವ ಮೂಲಕ ಡಾ.ಬಿ.ಆರ್.ಅಂಬೇಡ್ಕರ್ 69ನೇ ಮಹಾಪರಿನಿ ಬ್ಬಾಣ ದಿನವನ್ನು ಸೇವಾ ಕಾರ್ಯದೊಂದಿಗೆ ಆಚರಿಸಲಾಯಿತು.



ಈ ಸಂದರ್ಭದಲ್ಲಿ ಮಾತನಾಡಿದ ಹಿರಿಯ ಕ್ರೀಡಾಪಟು ಮಹದೇವ್ ಡಾ.ಬಿ.ಆರ್.ಅಂಬೇಡ್ಕರ್ 69ನೇ ಮಹಾಪರಿ ನಿಬ್ಬಾಣ ದಿನವನ್ನು ಇಂದಿನ ಯುವಪೀಳಿಗೆ ಅವರ ಆದರ್ಶ ತತ್ವ ಸಿದ್ಧಾಂತವನ್ನು ಅಳವಡಿಸಿಕೊಂಡು ನೀಡಿರುವ ಸಂವಿಧಾನ ಅಡಿಯಲ್ಲಿ ಎಲ್ಲರೂ ಶಾಂತಿಯುತ ವಾಗಿ ಸಹ ಬಾಳ್ವೆಯೊಂದಿಗೆ ಬಾಳಬೇಕು ಎಂದು ತಿಳಿಸಿದರು.

ನಂತರ ಮಾತನಾಡಿದ ಜೆ.ಡಿ.ಎಸ್. ಕಾರ್ಯಾ ಧ್ಯಕ್ಷ ಎಸ್.ಪ್ರಕಾಶ್ ಪ್ರಿಯದರ್ಶನ್ ಸ್ನೇಹ ಬಳಗವು ಸೇವಾ ಕಾರ್ಯ ದೊಂದಿಗೆ ಗೌರವ ನಮನ ಸಲ್ಲಿಸುತ್ತಿರುವುದು ಅತ್ಯಂತ ಸಂತೋಷಕರ ಸಂಗತಿ ಎಂದರು.

ಡಾ.ಬಿ.ಆರ್.ಅಂಬೇಡ್ಕರ್ ನೀಡಿರುವ ಸಂವಿಧಾನವನ್ನು ಭಾರ ತದ ಪ್ರತಿಯೊಬ್ಬ ಪ್ರಜೆಯು ಅಳವಡಿಸಿಕೊಂಡು ಬದುಕುತ್ತಿದ್ದೇವೆ. ಪ್ರತಿಯೊಬ್ಬ ಪ್ರಜೆಗೂ ಸಮಾ ನತೆ, ಮತದಾನದ ಹಕ್ಕನ್ನು ನೀಡಿರುವ ಈ ಆದರ್ಶ ಪುರುಷ ಭೌತಿಕವಾಗಿ ನಮ್ಮ ಜೊತೆ ಇಲ್ಲದೆ ಇರಬಹುದು. ಆದರೆ, ಅವರ ನಡೆದು ಬಂದ ಹಾದಿ ಅವರ ಆದರ್ಶ ವ್ಯಕ್ತಿತ್ವ ನಮಗೆ ಲ್ಲರಿಗೂ ಸದಾ ಪ್ರೇರಣೆಯಾಗಿದೆ ಎಂದರು. ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಹೋಮದೇವ್, ಹಿರಿಯ ಕ್ರೀಡಾಪಟು ಮಹದೇವ್, ಸಿಂಚನಗೌಡ (ಮಂಗಳಮುಖಿ), ವಿದ್ಯಾ, ಛಾಯಾ, ಗಾಯಕ ಯಶವಂತ್ ಕುಮಾರ್, ರಾಜೇಶ್ ಕುಮಾರ್ ಮಹೇಶ, ನಿರೀಕ್ಷಿತ್, ದತ್ತ ಇನ್ನಿತರರು ಇದ್ದರು.

# ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್‌ಗೆ ಚಾಲನೆ

ಮೈಸೂರು: ನಗರದ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನಲ್ಲಿ ಸೋಮವಾರ ಆಯೋಜಿಸಿದ್ದ ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್ (ಎಸ್‌ಐಎಚ್) ಎರಡು ದಿನಗಳ ಸಾಫ್ಟ್‌ವೇರ್ ಆವೃತ್ತಿಗೆ ಉದ್ಯಮಿ ರೋಹಿತ್ ಆರಾಧ್ಯ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಕೇವಲ ಜ್ಞಾನ ಇದ್ದರೆ ಪ್ರಯೋಜನ ಆಗಲಾರದು ಎನ್ನುವ ಹಂತದ ತಾಂತ್ರಿಕ ಪರಿವರ್ತನೆಯ ಅಂಚಿಗೆ ಜಗತ್ತು ಬಂದು ನಿಂತಿದೆ. ಈಗ ಯಾವುದೇ ಮಾಹಿತಿ ನಮ್ಮ ಬೆರಳ ತುದಿಯಲ್ಲಿ ಲಭ್ಯವಿದೆ. ನೀವು ಅದನ್ನು ಹೇಗೆ ಬಳಸುತ್ತೀರಿ, ನೀವು ಹೇಗೆ ಮೌಲ್ಯವನ್ನು ಸೇರಿಸುತ್ತೀರಿ, ನಿಮ್ಮ ಆಲೋಚನೆಗಳನ್ನು ಎಷ್ಟು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸುತ್ತೀರಿ ಎಂಬುದು ಮುಖ್ಯ ಎಂದರು.

ಯಶಸ್ಸು ಗಳಿಸಬೇಕಾದರೆ ಶೇ.5ರಷ್ಟು ಮಾತ್ರ ಕಲ್ಪನೆ ಮಾಡಿಕೊಳ್ಳಬೇಕು, ಶೇ.95ರಷ್ಟು ಕಲ್ಪನೆಯ



ಕಾರ್ಯಗತಗೊಳಿಸುವಿಕೆಗೆ ಮೀಸಲು ಇಡಬೇಕು. ಆಗ ಮಾತ್ರ ಯಶಸ್ಸು ದೊರೆಯುತ್ತದೆ. ಭಾರತೀಯ ಮಾರುಕಟ್ಟೆ ವಿಶಿಷ್ಟ ಮತ್ತು ಭಾವನಾತ್ಮಕವಾಗಿದೆ. ಉತ್ಪನ್ನದ ಯಶಸ್ಸು ಸಂಕೀರ್ಣತೆಯ ಮೇಲೆ ಅವಲಂಬಿತವಾಗಿಲ್ಲ, ಬದಲಿಗೆ ಸರಳತೆ ಮತ್ತು ಪ್ರಸ್ತುತತೆಯ ಮೇಲೆ ಅವಲಂಬಿತವಾಗಿದೆ. ಅಜ್ಞಾತ ಸಮಸ್ಯೆಯನ್ನು ಗುರುತಿಸುವುದು ದೊಡ್ಡ ಸವಾಲು ಎಂದರು.

ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪ ಗೌಡ, ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಪಿ.ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣನವರ್, ಎಐಸಿಟಿಇ ಪ್ರತಿನಿಧಿ ಅಖಿಲೇಶ್ ಕುಮಾರ್ ಸಿಂಗ್, ವಿವಿಸಿಇ ಉಪಪ್ರಾಂಶುಪಾಲರಾದ ಶೋಭಾ ಶಂಕರ್, ಆದಿತ್ಯ ಸಿ.ಆರ್., ನೋಡಲ್ ಸೆಂಟರ್ ಪ್ರಭಾರಿ ನಿತಿನ್ ಕುಮಾರ್ ಮುಂತಾದವರಿದ್ದರು.

# ಆರೋಗ್ಯಕ್ಕೆ ಆದ್ಯತೆ ನೀಡಿ: ಚಂದ್ರು ಸಲಹೆ

### ರೋಟರಿ ಸಂಸ್ಥೆಯಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ

ಚಾಮರಾಜನಗರ, ರೋಟರಿ ಸಂಸ್ಥೆ ವತಿಯಿಂದ ನಗರದಲ್ಲಿ ಇಂದು ಉಚಿತ ಕಣ್ಣಿನ ತಪಾಸಣಾ ಶಿಬಿರ ನಡೆಯಿತು.

ನಗರದ ಬಿ.ರಾಚಯ್ಯ ಜೋಡಿರಸ್ತೆಯಲ್ಲಿರುವ ರೋಟರಿ ಭವನದಲ್ಲಿ ರೋಟರಿ ಸಂಸ್ಥೆ, ರಾಷ್ಟ್ರೀಯ ಅಂಧತ್ವ ನಿಯಂತ್ರಣ ಕಾರ್ಯಕ್ರಮ, ಅರವಿಂದ ಕಣ್ಣಿನ ಆಸ್ಪತ್ರೆ ಇವರ ಸಂಯುಕ್ತಾಶ್ರಯದಲ್ಲಿ ನಡೆದ ಉಚಿತ ಕಣ್ಣಿನ ತಪಾಸಣೆ ಶಿಬಿರದಲ್ಲಿ 300 ಮಂದಿ ತಪಾಸಣೆ ಮಾಡಿಸಿಕೊಂಡರು. 170 ಮಂದಿ ಶಸ್ತ್ರಚಿಕಿತ್ಸೆಗೆ ಆಯ್ಕೆಯಾಗಿದ್ದು, ಅವರನ್ನು ಕೊಯಮತ್ತೂರಿನ ಅರವಿಂದ ಕಣ್ಣಿನ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಶಿಬಿರದಲ್ಲಿ ವ್ಯವಸ್ಥೆ ಮಾಡಲಾಯಿತು.

ರೋಟರಿ ಸಂಸ್ಥೆ ಅಧ್ಯಕ್ಷ ಕಾಗಲವಾಡಿ ಚಂದ್ರು ಮಾತನಾಡಿ, ಆರೋಗ್ಯಕ್ಕೆ ಮೊಲದ ಆಧ್ಯತೆ ನೀಡಬೇಕು. ಪಂಚೇಂದ್ರಿಯಗಳಲ್ಲಿ ಕಣ್ಣು ಪ್ರಮುಖವಾದ ಅಂಗವಾಗಿದೆ. ಕಣ್ಣುಗಳನ್ನು ರಕ್ಷಿಸಿಕೊಳ್ಳವುದರ ಮೂಲಕ ಅಂಧತ್ವ ನಿವಾರಣೆ ಮಾಡಿಕೊಳ್ಳಬೇಕಿದೆ ಎಂದರು.

ರೋಟರಿ ಸಂಸ್ಥೆಯು ಪ್ರತಿ ತಿಂಗಳು



ಮೊದಲನೆಯ ಭಾನುವಾರ ಉಚಿತ ನೇತ್ರ ತಪಾಸಣಾ ಶಿಬಿರವನ್ನು ಅಯೋಜಿಸುತ್ತಿದ್ದು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಶಿಬಿರದ ಪ್ರಯೋಜನ ಪಡೆದದ್ದು ತುಂಬಾ ಸಂತಸವಾಗಿದೆ ಎಂದರು. ಈ ಶಿಬಿರದಲ್ಲಿ ಇಬ್ಬರು ವಿದ್ಯಾರ್ಥಿಗಳಾದ ಚಂದ್ರಶೇಖರ್, ಧನುಷ್ ಅವರಿಗೆ ಕನ್ನಡಕ ವಿತರಿಸಲಾಯಿತು.

ರೋಟರಿ ಸಂಸ್ಥಾಪಕ ಸದಸ್ಯರಾದ ಶ್ರೀನಿವಾಸಶೆಟ್ಟಿ, ಕೆ.ಎಂ.ಮಹಾದೇವಸ್ವಾಮಿ, ಸುರಬಿ ನಾಗರಾಜು, ಪ್ರಭಾಕರ್, ಸಿ.ಎ.ನಾರಾಯಣ್, ಸುರೇಶ್, ಅಂಕಶೆಟ್ಟಿ, ಎಲ್.ನಾಗರಾಜು, ಎ.ಶ್ರೀನಿವಾಸನ್, ರೂಪೇಶ್, ಮಹಾದೇವಸ್ವಾಮಿ, ಅಬ್ದುಲ್ ಅಜೀಜ್ ದೀನಾ, ರಾಜುವರ್ಗೀಸ್, ಡಾ.ಪರಮೇಶ್ವರಪ್ಪ, ಸವಿತಾ, ಪಿಆರ್‌ಒ ವಿಜಯಕಾಂತ್ ಇತರರು ಹಾಜರಿದ್ದರು.

### ಬಿಸಲವಾಡಿ ಯೂತ್ ಬಾಯ್ಸ್ ವಾಲಿಬಾಲ್ ಪಂದ್ಯಾವಳಿ ಸೀಸನ್–2ಗೆ ಚಾಲನೆ

# ಸೌಹಾರ್ದತೆ ಹೆಚ್ಚಿಸುವ ಗ್ರಾಮೀಣ ಕ್ರೀಡೆಗಳು

ಚಾಮರಾಜನಗರ: ಗ್ರಾಮಾಂತರ ಪ್ರದೇಶಗಳಲ್ಲಿ ನಡೆಯುವ ಕ್ರೀಡೆಗಳು ಹಳ್ಳಿ ಹಳ್ಳಿಗಳ ನಡುವೆ ಸೌಹಾರ್ದತೆ ಮತ್ತು ಪರಸ್ಪರ ಪ್ರೀತಿಯನ್ನು ಹೆಚ್ಚಿಸುತ್ತವೆ. ಇಂಥ ಕ್ರೀಡೆಗಳು ಹೆಚ್ಚು ಆಯೋಜನೆಗೊಳ್ಳಬೇಕು ಎಂದು ಎಂಎಸ್‌ಎಲ್‌ನ ಅಧ್ಯಕ್ಷರು ಆದ ಶಾಸಕ ಸಿ. ಪುಟ್ಟರಂಗಶೆಟ್ಟಿ ತಿಳಿಸಿದರು.

ತಾಲೂಕಿನ ಬಿಸಲವಾಡಿ ಗ್ರಾಮದಲ್ಲಿ ಬಿಸಲವಾಡಿ ಯೂತ್ ಬಾಯ್ಸ್ ಸೀಸನ್ –2 ವಾಲಿಬಾಲ್ ಪಂದ್ಯಾವಳಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಇಂಥ ಕ್ರೀಡೆಗಳು ಯುವಕರಲ್ಲಿ ಉತ್ಸಾಹ ಹೆಚ್ಚುತ್ತದೆ. ಜೊತೆಗೆ ಜಿಲ್ಲಾ ಹಾಗು ರಾಜ್ಯ ಮಟ್ಟದ ಪಂದ್ಯಾವಳಿಗಳಲ್ಲಿ ಭಾಗವಹಿಸಿ, ಜಿಲ್ಲೆ ಹಾಗೂ ಗ್ರಾಮಕ್ಕೆ ಕೀರ್ತಿ ತರಲು ಸಹಕಾರಿಯಾಗುತ್ತದೆ. ಬಹಳಷ್ಟು ಗ್ರಾಮೀಣ ಪ್ರತಿಭೆಗಳೇ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿಯನ್ನು ಪಡೆದಿದ್ದಾರೆ. ಆ ಸಾಲಿನಲ್ಲಿ ಬಿಸಲವಾಡಿ ಗ್ರಾಮದ ಯುವಕರು ಸಹ ಸೇರಬೇಕು. ನಿರಂತರ ಪರಿಶ್ರಮ ಹಾಗು ಇಚ್ಛಾಶಕ್ತಿ ಇದ್ದರೆ ಗೆಲುವು ನಮ್ಮದಾಗುತ್ತದೆ ಎಂದರು.



ಯುವಕರು ಕ್ರೀಡೆಗೆ ಅದ್ಯತೆ ನೀಡಬೇಕು. ಓದಿನೊಂದಿಗೆ ಆಸಕ್ತಿ ಇರುವ ಕ್ರೀಡೆಯಲ್ಲಿ ತೊಡಗಿಸಿಕೊಂಡಾಗ ಅದರಲ್ಲಿಯೇ ಗೆಲುವು ಸಾಧಿಸಿದರೆ, ಉದ್ಯೋಗ ಮತ್ತು ಬದುಕು ಕಟ್ಟಿಕೊಳ್ಳಲು ಅವಕಾಶವಿದೆ. ಯಾವುದೇ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಕ್ರೀಡೆ ಪಟುಗಳಿಗೆ ವಿಶೇಷ ಕೋಟಾವನ್ನು ನೀಡಲಾಗುತ್ತದೆ. ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕು ಎಂದರು.

ಇದೇ ಸಂದರ್ಭದಲ್ಲಿ ಬ್ಯಾಂಕ್‌ಂಗ್ ಪೇರಾ ಒಲಂಪಿಕ್ಸ್ ಕಮ್ಯೂನಿಟ್ ಆಫ್ ಇಂಡಿಯಾದ ಅಂತರರಾಷ್ಟ್ರೀಯ ಮಟ್ಟದ ಉದ್ದ ಜಿಗಿತ ಸ್ಪರ್ಧೆಯಲ್ಲಿ ಉತ್ತಮ ಪ್ರದರ್ಶನ ನೀಡಿ, ದ್ವಿತೀಯ ಸ್ಥಾನ ಪಡೆದ ಬಿಸಲವಾಡಿ ಗ್ರಾಮದ ಮನು ಅವರನ್ನು ಗ್ರಾಮಸ್ಥರ ಪರವಾಗಿ ಶಾಸಕರು ಶಾಲು ಹೊದಿಸಿ, ಹಾರ ಹಾಕಿ ಸನ್ಮಾನಿಸಿದರು. ತಾ.ಪಂ. ಮಾಜಿ ಅಧ್ಯಕ್ಷ ಬಿ.ಕೆ. ರವಿಕುಮಾರ್, ಚುಡಾ ಅಧ್ಯಕ್ಷ ಮಹಮದ್ ಅಸ್ಗರ್ ಮುನ್ನಾ, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಬಿಸಲವಾಡಿ ರವಿ, ಗ್ರಾ.ಪಂ. ಮಾಜಿ ಅಧ್ಯಕ್ಷರಾದ ಸಿ. ಮಹದೇವಪ್ಪ, ರಮ್ಯ ನಾಗರಾಜು, ಸದಸ್ಯರಾದ ಕುಮಾರ್, ನಾಗರತ್ನಮ್ಮ, ನಾರಾಯಣನಾಯಕ, ಗೀತಾ ಚನ್ನಬಸಪ್ಪ, ನಾಗಮ್ಮ, ಶಿವಣ್ಣ, ಪಿಎಸಿಸಿ ಬ್ಯಾಂಕ್ ಅಧ್ಯಕ್ಷ ಶಿವಸ್ವಾಮಿ, ಸದಸ್ಯರಾದ ಮಂಜುನಾಥ್, ಉಮೇಶ್, ಶಿವಕುಮಾರ್, ಸಿದ್ದಶೆಟ್ಟಿ, ಬಸವಣ್ಣ, ನಾಗರಾಜು, ಮಾಜಿ ಅಧ್ಯಕ್ಷರಾದ ಸಿದ್ದನಾಯಕ, ಶಿವಕುಮಾರ್, ಮಹದೇವಯ್ಯ, ಮುಖಂಡರಾದ ಕೆ.ಜಿ. ಬಸವರಾಜು, ಎಂ.ರಾಜು, ಅನಿಲ್, ರವಿಕುಮಾರ್, ಗಿರೀಶ್, ನಟ, ಮುಖಂಡರು, ಯಜಮಾನರು, ಮುಖಂಡರು ಸಂಘ ಸಂಸ್ಥೆಗಳ ಪದಾಧಿಕಾರಿಗಳು ಸದಸ್ಯರು, ಗ್ರಾಮಸ್ಥರು, ಕ್ರೀಡಾಭಿಮಾನಿಗಳು ಉಪಸ್ಥಿತರಿದ್ದರು.

# ಒಮ್ಮೆ ಬಿರುಕು ಮೂಡಿತೆಂದರೆ ಸಾಕು ಜೋಡಿಸುವುದು ಬಲು ಕಷ್ಟ



ಬದುಕಿನಲ್ಲಿ ನಂಬಿಕೆ ಎನ್ನುವುದು ಅತಿಮುಖ್ಯ. ಜೀವನದಲ್ಲಿ ನಂಬಿಕೆ ಅನ್ನೋದು ಒಂದು ಪ್ರಯಾಣ, ಜೀವನದಲ್ಲಿ ನಂಬಿಕೆ ಅನ್ನುವುದು ಒಂದು ಇತಿಹಾಸ, ನಂಬಿಕೆಯಿಲ್ಲದವನ ಬಾಳು ನರಕ, ಬದುಕನ್ನು ನಡೆಸುತ್ತಿರುವ ಶಕ್ತಿಯ ಮೇಲೆ ಬದುಕಿನಲ್ಲಿ ಜತೆಯಾಗಿರುವ ಸಹಜೀವಿಗಳ ಮೇಲೆ, ಕೊನೆಗೆ ತನ್ನ ಮೇಲೆ ನಂಬಿಕೆ ಇರಲೇಬೇಕು. ದೇವರು ಅಮೂರ್ತ ಸತ್ಯಗಳನ್ನು ನಿರ್ದೇಶಿಸುವ ಮೂಲಕ ತನ್ನನ್ನು ಬಹಿರಂಗಪಡಿಸಲಿಲ್ಲ ಆದರೆ ಮಾನವ ಇತಿಹಾಸದಲ್ಲಿ ಕಾರ್ಯನಿರ್ವಹಿಸುವ ಮೂಲಕ ನಂಬಿಕೆಯ ಪ್ರತಿಕ್ರಿಯೆಯು ಐತಿಹಾಸಿಕವಾಗಿದೆ, ಅಂದರೆ ಅದನ್ನು ಮತ್ತೆ ಮತ್ತೆ ನಾವೇ ನವೀಕರಿಸಬೇಕು ಮತ್ತು ನಾವೇ ರಿಫ್ರೆಶ್ ಮಾಡಬೇಕು. ಈ ಪ್ರಪಂಚದಲ್ಲಿ ಯಾರೇ ಆದರೂ ನಂಬಿಕೆ ಅನ್ನುವುದನ್ನ ಕಳೆದುಕೊಳ್ಳುವ ಕೆಲಸ ಮಾಡಬಾರದು. ಏಕೆಂದರೆ ನಂಬಿಕೆ ಎಂಬುದು ಗಾಜಿನ ಹಾಗೆ, ಒಮ್ಮೆ ಒಡೆದು ಹೋದರೆ ಮತ್ತೆ ಯತಾಸ್ಥಿತಿಗೆ ತರುವುದು ಕಷ್ಟಸಾಧ್ಯ. ಒಮ್ಮೆ ಬಿರುಕು ಮೂಡಿತೆಂದರೆ ಅದನ್ನು ಸೇರಿಸಲು ಬಲು ಕಷ್ಟ. ಜೀವನದಲ್ಲಿ ಎದುರಾಗುವ ಯಾವುದೇ ಸವಾಲುಗಳನ್ನು ಸ್ವೀಕರಿಸಲು ನಾವು ಸದಾ ಸಿದ್ಧರಾಗಿರಬೇಕು, ಅದು ಜೀವನದಲ್ಲಿ ಕೇವಲ ಒಂದು ಭಾಗವಾಗಿ ಅಲ್ಲ, ಜೀವನವೇ ಒಂದು ಸವಾಲು ಅನ್ನುವ ಹಾಗೆ. ಈ ಮಧ್ಯೆ ನಾವು ಅಷ್ಟಕ್ಕೇ ಸಮಾಧಾನ ಪಟ್ಟುಕೊಂಡರೆ ಸಾಲದು. ನಮ್ಮ ಜೀವನದ ಕೊನೆಯ ಘಳಿಗೆಯವರೆಗೂ ನಾವು ಸವಾಲಿನಲ್ಲಿಯೇ ಬದುಕಿದರೆ ನಮ್ಮ ಕನಸು ನಮ್ಮ ಜತೆಯಲ್ಲಿಯೇ ಇರುತ್ತದೆ.

ಕವಿ ಚೆನ್ನವೀರ ಕಣವಿಯವರ ನಂಬಿಕೆ ಎಂಬ ಕವನದ ಈ ಸಾಲುಗಳಂತೆ,

ನನ್ನ ನಂಬಿಕೆಯೊಂದು ಆಕಾಶ ನಿಜ ಅದಕೆ ತಳಬುಡವಿಲ್ಲ, ನಾನೆಷ್ಟು ಬೆಳೆದರೂ ನನಗೆ ನಿಲುಕುವುದಿಲ್ಲ, ದೂರದಿಂದಲ್ಲದೆ ನಾನದನು ಮುಟ್ಟಿ ಅನುಭವಿಸಿಲ್ಲ, ಮೇಲೆ ನೋಡದೆ ಸಟೆದುಕೊಂಡೇ ನಡೆದರೂ ಅದು ಸದಾ ನನ್ನ ತಲೆಯ ಮೇಲೆ, ಇಲ್ಲಿ ಕವಿ ವ್ಯಕ್ತಿನಿಷ್ಠಕವಾದ ಹಾಗೂ ಬದುಕನ್ನು ಆವರಿಸಿಕೊಂಡಿರುವ ನಂಬಿಕೆಯ ಕುರಿತು ಚಿಂತಿಸುತ್ತಾರೆ. ನಂಬಿಕೆಯೆಂಬುದು ಆಕಾಶದಂತೆ ವಿಶಾಲವಾದುದು, ಅಮೋಘವಾದುದು. ಕವಿಯು ಪ್ರಶ್ನಿಸಿದರೂ ಅವರ ಮಿತಿಯನ್ನು ಮೀರಿರುವಂತಹುದು ನಂಬಿಕೆ. ಅದು ಮುಟ್ಟಿ ನೋಡಲು ಬರುವಂತದ್ದಲ್ಲ. ಅನುಭವಕ್ಕೆ ಮಾತ್ರ ಬರುವಂತದ್ದು, ಆ ನಂಬಿಕೆಯನ್ನು ಬುದ್ಧಿಪೂರ್ವಕವಾಗಿ ತಿರಸ್ಕರಿಸಲು ಹೋದರೂ ಮನಃಪೂರ್ವಕವಾಗಿ ಒಪ್ಪಿಕೊಂಡಿದ್ದಾದ್ದರಿಂದ ಕೊನೆಗೂ ನಂಬಿಕೆಯೇ ಗೆಲ್ಲುತ್ತದೆ ಎನ್ನುತ್ತಾರೆ ಕವಿ. ಆದರೆ ವ್ಯಕ್ತಿ ವ್ಯಕ್ತಿಗಳಲ್ಲಿ, ವಿಚಾರಗಳಲ್ಲಿ, ಧರ್ಮದಲ್ಲಿ, ಒಳಿತಿನಲ್ಲಿ, ಮೌಲ್ಯಗಳಲ್ಲಿ, ನೀತಿಯಲ್ಲಿ ನಂಬಿಕೆ ಕಳೆದುಕೊಳ್ಳುತ್ತಿರುವ ಇಂದಿನ ಮನುಷ್ಯ ಎಂಥ ಕೆಟ್ಟ ಸ್ಥಿತಿಗೆ ತಲುಪುತ್ತಿದ್ದಾನಲ್ಲವೇ ಅದಕ್ಕೆ ಕಾರಣವನ್ನು ಹುಡುಕುತ್ತಾ ಆಸ್ಕರ್ ವೈಲ್ಡ್ We did not dare breath a prayer or give our anguish scope! Something was dead in each of us and what was dead was hope ಒಂದು ಪ್ರಾರ್ಥನೆಯನ್ನು ಉಚ್ಚರಿಸುವ, ನಮ್ಮ ವೇದನೆಗೂ ಒಂದು ಅವಕಾಶ ಕೊಡುವ ಧೈರ್ಯ ನಮ್ಮಲ್ಲಿಲ್ಲ. ನಮ್ಮೆಲ್ಲರಲ್ಲೂ ಏನೋ ಒಂದು ಸತ್ತುಹೋಗಿದೆ, ಅದು ನಂಬಿಕೆ ಎನ್ನುತ್ತಾರೆ. ಹಾಗೆಂದು ಎಲ್ಲವನ್ನು ಕುರುಡಾಗಿ ನಂಬಲೇ ಬೇಕೆಂತಿಲ್ಲ. ಮೊದಲು ನಂಬಿಕೆ, ನಂತರ ಪರೀಕ್ಷೆ, ಪರೀಕ್ಷೆ ಫಲ ಕೊಟ್ಟಾಗ ಅಚಲ ಶ್ರದ್ಧೆ ಮೂಡುತ್ತದೆ. ಆಂಗ್ಲಭಾಷೆಯ ಒಂದು ನಾಣ್ಣುಡಿ ಹೀಗೆ ಹೇಳುತ್ತದೆ. Hope for the best and prepare for the worst ಒಳಿತಿಗಾಗಿ ನಂಬಿಕೆ ಇರಲಿ, ಕೆಟ್ಟದ್ದನ್ನೆದುರಿಸಲು ನಾವು ತಯಾರಾಗಿರಬೇಕು. ಸನ್ಮಾರ್ಗದಲ್ಲಿ ನಡೆಯುವಂತೆ ಪ್ರೇರೇಪಿಸುವ ನಂಬಿಕೆಗಳಿಂದ ವ್ಯಕ್ತಿಗೂ, ಸಮಾಜಕ್ಕೂ ಹಿತ. ಅಂತ ನಂಬಿಕೆಗಳು ಎಲ್ಲಾರಲ್ಲೂ ಮೂಡುವಂತಾಗಲಿ.




ಪುಷ್ಪ ಪ್ರಸಾದ್

# ಮೌನ ಸಾಧನೆ



ಮೌನವಾಗಿಯೇ ಉಳಿದು ತಮ್ಮ ವಿರೋಧಿಗಳ ಬಾಯಿ ಮುಚ್ಚಿಸುವಲ್ಲಿ ಆಪಲ್ ಜನಕ ಸ್ಟೀವ್ ಜಾಬ್ಸ್ ಅದ್ವಿತೀಯರಾಗಿದ್ದರು.

1997ರ ಅವಧಿಯಲ್ಲಿ ಇನ್ನೇನು ಕೆಲವೇ ದಿನಗಳಲ್ಲಿ ದಿವಾಳಿಯಾಗುತ್ತೇವೆ ಎಂಬ ಭಯ ಇದ್ದಾಗ ಸ್ಟಾಕ್ ಮಾರ್ಕೆಟ್ ನಲ್ಲಿ ಆಪಲ್ ನ ಷೇರುಗಳು ಅತ್ಯಂತ ವೇಗದಲ್ಲಿ ಇಳಿಮುಖ ಪಯಣವನ್ನು ಆರಂಭಿಸಿತ್ತು. ಉದ್ಯೋಗಿಗಳು ಕೆಲಸವನ್ನು ಬಿಡತೊಡಗಿದ್ದರು. ಆಪಲ್ ನೆಲಕಚ್ಚುತ್ತದೆ ಎಂಬುದು ನಿಶ್ಚಿತವಾಗಿತ್ತು. ಆ ಹೊತ್ತಿನಲ್ಲಿ ಆಪಲ್ ನ ಕಾರ್ಯನಿರ್ವಾಹಕ ಅದೇ ಸದಸ್ಯರ ಬೋರ್ಡ್ ಗೆ ಸ್ಟೀವ್ ಜಾಬ್ಸ್ ರನ್ನು ಮತ್ತೆ ಮರಳಿ ಕರೆತರಲಾಗಿತ್ತು.

ಹಾಗೆ ಮರಳಿದ ಸ್ಟೀವ್ ಜಾಬ್ಸ್ ಮೊದಲ ಕಾರ್ಯವೇ ಎಲ್ಲರನ್ನೂ ನಡುಗಿಸಿತ್ತು. ಉತ್ಪನ್ನದ ತಂತ್ರಗಾರಿಕೆಯ ಕುರಿತ ಮೀಟಿಂಗ್ ನಲ್ಲಿ ಆತ ತನ್ನ ಎದುರಿಗಿದ್ದ ಅತಿ ಉದ್ದದ ಟೇಬಲ್ ನ ಮೇಲೆ ಸಾಲಾಗಿ ಉಪಯೋಗಿಸಲಾಗಿದ್ದ ಕಂಪ್ಯೂಟರ್ ಗಳು, ಪ್ರಿಂಟರ್ಗಳು ಮತ್ತು ಇತರ ಎಲೆಕ್ಟ್ರಾನಿಕ್ ಗ್ಯಾಜೆಟ್ ಗಳನ್ನು ತೀಕ್ಷ್ಣವಾಗಿ ನೋಡಿದ. ಬಹಳ ಹೊತ್ತಿನವರೆಗೆ ಹಾಗೆ ಆ ವಸ್ತುಗಳನ್ನು ನೋಡುತ್ತಾ ಸುಮ್ಮನೆ ಕುಳಿತ ಆತ ನಂತರ ತುಸು ಕೆಮ್ಮಿ ತನ್ನ ದನಿಯನ್ನು ಸರಿಪಡಿಸಿಕೊಂಡ.

ಆತನ ಕೆಮ್ಮುವಿಕೆಯನ್ನು ಕೇಳಿದ ಉಳಿದೆಲ್ಲ ಸದಸ್ಯರು ತಮ್ಮ ತಮ್ಮ ಸೀಟುಗಳಲ್ಲಿ ಸರಿಯಾಗಿ ಕುಳಿತುಕೊಂಡರು.ಅಂತಿಮವಾಗಿ ಸ್ಟೀವ್ ಅತ್ಯಂತ ಶಾಂತವಾದ ಸ್ವರದಲ್ಲಿ

ನಾವು ಒಟ್ಟಾಗಿ ನಾಲ್ಕು ಉತ್ಪನ್ನಗಳನ್ನು ತಯಾರಿಸುತಿದ್ದೇವೆ. ಆ ನಾಲ್ಕು ಉತ್ಪನ್ನಗಳು ಅತ್ಯಂತ ಉತ್ಕೃಷ್ಟವಾಗಿವೆ ಎಂಬುದು ನಿಜ ಎಲ್ಲವೂ ಸರಿಯೇ ಆದರೆ ಅವೆಲ್ಲವನ್ನು ಬಿಟ್ಟುಬಿಡಿ ಎಂದು ನುಡಿದ. ಸಭೆಯಲ್ಲಿದ್ದ ಇಂಜಿನಿಯರಗಳು ಭಯದಿಂದ ನಡುಗಿದರು. ಮಾರುಕಟ್ಟೆ ಹೂಡಿಕೆದಾರರು ತೀವ್ರವಾಗಿ ವಿರೋಧಿಸಿದರು. ಇಡೀ ನಾಲ್ಕು ಉತ್ಪನ್ನಗಳ ಜವಾಬ್ದಾರಿಯನ್ನು ಹೊತ್ತು ನಾಲ್ಕು ಡಿಪಾರ್ಟ್ಮೆಂಟ್ ಗಳ ಸದಸ್ಯರು ತಮ್ಮ ಎಲ್ಲಾ ಉತ್ಪನ್ನಗಳ ಉಳಿಯುವಿಕೆಗಾಗಿ ಆತನನ್ನು ಬೇಡಿಕೊಂಡರು. ಊಹೂಂ ಜಾಬ್ಸ್ ಇದಾವುದನ್ನು ಒಪ್ಪಲಿಲ್ಲ.



ತನ್ನ ಎದುರಿಗಿನ ಟೇಬಲ್ ಮೇಲಿರುವ ಎಲ್ಲ ಒಪ್ಪಂದಗಳನ್ನು ಆತ ಒಂದೊಂದಾಗಿ ತೆರವುಗೊಳಿಸಲು ಆದೇಶ ನೀಡಿದ. ಅಂತಿಮವಾಗಿ ಟೇಬಲ್ ನ ಮೇಲಿದ್ದ ಆಪಲ್ ನ ಪ್ರತಿಯೊಂದು ಉತ್ಪನ್ನಗಳು ಟೇಬಲ್ ಮೇಲಿಂದ ತಳ್ಳಲ್ಪಟ್ಟವು ಅದರ ಜೊತೆಜೊತೆಗೆ ಅದುವರಿಗೆ ಅವರು ಅನುಭವಿಸಿದ ಎಲ್ಲಾ ತೊಡಕುಗಳು ಮತ್ತು ವ್ಯಾಕುಲತೆಗಳು ಕೂಡ ಹೊರ ದಬ್ಬಲ್ಪಟ್ಟವು. ಒಂದು ಬಾರಿ ಇಡೀ ಟೇಬಲ್ ತೆರವುಗೊಂಡು ಖಾಲಿ ಟೇಬಲ್ ಅನ್ನು ತೋರಿಸಿ ಆತ ಹೀಗೆ ನಾವು ಗೆದ್ದಿದ್ದೆವು ಮತ್ತು ಮುಂದೆ ಕೂಡ ಹೀಗೆಯೇ ಗೆಲ್ಲುತ್ತೇವೆ ಎಂದು ಹೇಳಿದ ಮುಂದೆ ಅದೇ ಖಾಲಿ ಟೇಬಲ್ ನ ಮೇಲೆ ಐಮ್ಯಾಕ್, ಐ ಪ್ಯಾಡ್, ಐಫೋನ್ ಮತ್ತು ಐ ಪಾಡ್ ಗಳು ಸೃಷ್ಟಿಯಾಗಿ ಬಂದು ಕುಳಿತವು. ಗ್ರಾಹಕರ ಇತಿಹಾಸದಲ್ಲಿಯೇ ಅತ್ಯಂತ ಹೆಚ್ಚು ಲಾಭದಾಯಕವಾದ ಉತ್ಪನ್ನವಾಗಿ ಮಾರುಕಟ್ಟೆಯನ್ನು ಆಕ್ರಮಿಸಿದ ಈ ಉತ್ಪನ್ನಗಳು ಇತಿಹಾಸವನ್ನು ಸೃಷ್ಟಿಸಿದವು

ಆಪಲ್ ಕಂಪನಿಯು ಕೂಡಿಸುವುದರಿಂದ ಬೆಳೆಯಲಿಲ್ಲ ಬದಲಾಗಿ ಕಳೆಯುವುದರಿಂದ ಹೆಚ್ಚು ಬೆಳವಣಿಗೆಯನ್ನು ಕಂಡಿತು.

ಆಪಲ್ ಕಂಪನಿಯ ಬೆಳವಣಿಗೆಯಲ್ಲಿ ನಮಗೆ ಮಾರುಕಟ್ಟೆ ತಂತ್ರಜ್ಞಾನದ ಕುರಿತ ಪಾಠ ದೊರೆಯುತ್ತದೆ

ವಿಪರೀತ ಸಂಕೀರ್ಣತೆಗಳು ಮಾರಾಟವನ್ನು ಕಡಿಮೆಗೊಳಿಸುತ್ತವೆ. ಸ್ಪಷ್ಟತೆ ಪ್ರಭುತ್ವವನ್ನು ಸಾಧಿಸುತ್ತದೆ.

ಬಹುತೇಕ ಜನರು ಮಾರುಕಟ್ಟೆಯಲ್ಲಿ ಕಡೆಗಣಿಸುವ ಕೆಲ ವಿಷಯಗಳನ್ನು ಸ್ಟೀವ್ ಜಾಬ್ಸ್ ಗುರುತಿಸಿದ್ದರು.

ಗ್ರಾಹಕರು ಅತ್ಯುತ್ತಮವಾದ ಉತ್ಪನ್ನಗಳನ್ನು ಖರೀದಿಸುವುದಕ್ಕಿಂತ ಸ್ಪಷ್ಟವಾಗಿ ಬಳಸಲು ಅನುಕೂಲವಾಗುವ ಉತ್ಪನ್ನಗಳನ್ನು ಖರೀದಿಸುತ್ತಾರೆ

ಸಾಮಾನ್ಯವಾಗಿ ನಾವು ಡ್ರೈವ ಇನ್ ಗಳಲ್ಲಿ ನೂರೆಂಟು ಆಯ್ಕೆಗಳು ಇದ್ದರೂ ಕೂಡ ಬರ್ಗರ್ ಖರೀದಿಸಲು ಕಾರಣ ಇದೆ.

ಹೋಟೆಲ್ಗಳಲ್ಲಿ ಎಲ್ಲಕ್ಕಿಂತ ಮುಂಚೆ ಆರ್ಡರ್ ಮಾಡೋದು ಇಡ್ಲಿ, ವಡೆ ಇಲ್ಲವೇ ದೋಸೆಗೆ ಮನೆಗೆ ಅತಿಥಿಗಳು ಬಂದಾಗ ಮೊದಲು ಮಾಡುವುದು ಅವಲಕ್ಕಿ ಇಲ್ಲವೆ ಉಪ್ಪಿಟ್ಟನ್ನು ಜೋರು ಗದ್ದಲದ ಸದಾ ಕರ್ಕಶವಾಗಿ ಕೇಳುವ ಚಾನಲ್ ಗಳಿಂದ ಸ್ವಚ್ಛವಾಗಿ ಸ್ಫುಟವಾಗಿ ಕೇಳುವ

ರೇಡಿಯೋ ಚಾನೆಲ್ ಗಳನ್ನು ಆಯ್ದುಕೊಳ್ಳುವುದು ಕೂಡ ಇದೇ ಕಾರಣಕ್ಕೆ. ಆಯ್ಕೆಗಳನ್ನು ಕಡಿತಗೊಳಿಸಿದಾಗ ಮಾರುಕಟ್ಟೆಯಲ್ಲಿ ಉತ್ಪನ್ನದ ಬೆಲೆ ಹೆಚ್ಚಾಗುತ್ತದೆ. ಆಯ್ಕೆಗಳನ್ನು ನೀವು ಸರಳಗೊಳಿಸಿದಾಗ ಜನರು ವೇಗವಾಗಿ ಪ್ರತಿ ಸ್ಪಂದಿಸುತ್ತಾರೆ. ಖಾಲಿ ಟೇಬಲ್ ತತ್ವ ನಮಗೆ ಕಲಿಸುವುದು ನಮಗೆ ಹೆಚ್ಚು ಉತ್ಪನ್ನಗಳ ಅವಶ್ಯಕತೆ ಇಲ್ಲ ಬದಲಾಗಿ ಉದ್ದೇಶ ಗಳ ಅವಶ್ಯಕತೆ ಇದೆ ಬೆಳವಣಿಗೆ ಎಂದರೆ ಎಲ್ಲವನ್ನು ಕೊಡುವುದಲ್ಲ ಯಾವುದನ್ನು ಎಷ್ಟು ಕೊಡಬೇಕು ಎಂಬುದನ್ನು ಮರೆಯದೆ ಸರಿಯಾಗಿ ನೀಡುವುದು. ನೀವು ಕೊಡುವ ಉತ್ಪನ್ನದಲ್ಲಿ ಸ್ಪಷ್ಟತೆ ಇದ್ದರೆ ಜನರಲ್ಲಿ ಉತ್ಪನ್ನದ ಕುರಿತು ವಿಶ್ವಾಸ ಮೂಡುತ್ತದೆ. ಆಗ ವಸ್ತುಗಳನ್ನು ಖರೀದಿಸಲು ಜನರು ಮುಗಿಬೀಳುತ್ತಾರೆ.

ಏನಂತೀರಾ ಸ್ನೇಹಿತರೇ


ವೀಣಾ ಹೇಮಂತ್ ಗೌಡ ಪಾಟೀಲ್
ಮುಂಡರಗಿ ಗದಗ್

# ನಾಲ್ವಡಿ ಕೃಷ್ಣರಾಜ ಒಡೆಯರ್: 'ರಾಜರ್ಷಿ' ಮತ್ತು ಆಧುನಿಕ ಕರ್ನಾಟಕದ ಶಿಲ್ಪಿ



**ಯೆಂಡ ಯೆಡ್ತಿ ಕನ್ನಡ್ ಪದಗೊಳ್**
**ಅಂದ್ರೆ ರತ್ನಂಗ್ ಪ್ರಾಣ,**
**ಬುಂಡೇನ್ ಎತ್ತಿ ಕುಡುದ್ಬುಟ್ಟಾಂದ್ರೆ-**
**ತಕ್ಕೋ ! ಪದಗೊಳ್ ಬಾಣ !**

**ಬಗವಂತ್ ಏನ್ರ ಬೂಮೀಗ್ ಇಳದು,**
**ನನ್ತಾಕ್ ಬಂದಾಂತ್ ಅನ್ನು;**
**ಪರ್ ಗಿರೀಕ್ಸೆ ಮಾಡ್ತಾನ್ ಔನು-**
**ಬಕ್ತನ್ ಮೇಲ್ ಔನ್ ಕಣ್ಣು !**

**ಯೆಂಡ ಕುಡಿಯಾದ್ ಬುಟ್ ಬುಡ್ ರತ್ನ!**
**ಅಂತ್ ಔನ್ ಏನಾರ್ ಅಂದ್ರೆ !**
**ಮೂಗ್ ಮೂರ್ ಚೂರಾಗ್ ಮುರಸ್ಕೋಂತೀನಿ**
**ದೇವರ್ ಮಾತ್ಗ್ ಅಡ್ಬಂದ್ರೆ !**

ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ (ಕ್ರಿ.ಶ. 18841940) ಅವರು ತಮ್ಮ ಆಳ್ವಿಕೆಯ ಅವಧಿಯಲ್ಲಿ (19021940) ಮೈಸೂರು ಸಂಸ್ಥಾನದಲ್ಲಿ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಕ್ಷೇತ್ರಗಳಲ್ಲಿ ಮಾಡಿದ ಕ್ರಾಂತಿಕಾರಿ ಸುಧಾರಣೆಗಳಿಂದಾಗಿ ಇತಿಹಾಸದಲ್ಲಿ ಒಂದು ವಿಶಿಷ್ಟ ಸ್ಥಾನವನ್ನು ಪಡೆದಿದ್ದಾರೆ. ಅವರ ಆಳ್ವಿಕೆಯಲ್ಲಿ ಮೈಸೂರು ರಾಜ್ಯವು ಭಾರತದಲ್ಲಿಯೇ ಅತ್ಯುತ್ತಮ ಆಡಳಿತವನ್ನು ಹೊಂದಿದ ರಾಜ್ಯ ಎಂದು ವಿಶ್ವಮಾನ್ಯತೆ ಗಳಿಸಿತು.

ಕನ್ನಡ ನಾಡಿನ ಪ್ರಾತಃ ಸ್ಮರಣೀಯ ವ್ಯಕ್ತಿಗಳಲ್ಲಿ ಒಬ್ಬರು ಆಧುನಿಕ ಕನ್ನಡ ನಾಡಿನ ನಿರ್ಮಾತೃ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್. ಇಂದು ನಮ್ಮ ರಾಜ್ಯ ರಾಜಧಾನಿ ಬೆಂಗಳೂರನ್ನು ಭಾರತದ ಸಿಲಿಕಾನ್ ವ್ಯಾಲಿ ಎಂದು ಕರೆಯಲಾಗುತ್ತದೆ. ವಿಶ್ವದಾದ್ಯಂತ ಬೆಂಗಳೂರು ಸಾಕಷ್ಟು ಪ್ರಸಿದ್ಧಿ ಪಡೆದಿದೆ. ದೇಶ ಯುವಜನರು ಉದ್ಯೋಗಾವಕಾಶಗಳನ್ನು ಅರಸುವಾಗ ಅವರ ಮನಸ್ಸಿನಲ್ಲಿ ಮೂಡುವುದು ಮೊದಲಿಗೆ ಬೆಂಗಳೂರಿನ ಹೆಸರು. ಮಾಹಿತಿ ತಂತ್ರಜ್ಞಾನ, ಕೈಗಾರಿಕೆಗಳು, ಸ್ಟಾರ್ಟ್ ಅಪ್, ಶೈಕ್ಷಣಿಕ ವಲಯ ಹೀಗೆ ಬೆಂಗಳೂರು ಹತ್ತು ಹಲವು ಕ್ಷೇತ್ರಗಳಲ್ಲಿ ಇಂದು ವಿಶ್ವವ್ಯಾಪ್ತಿಯಾಗಿದೆ. ಆದರೆ ಈ ಸಾಧನೆ ಕೇವಲ ಒಂದೆರಡು ದಶಕಗಳಲ್ಲಿ ಸಾಧನೆಯಾದದ್ದಲ್ಲ. ಅದರ ಹಿಂದೆ ನೂರಾರು ವರ್ಷಗಳ ಪರಿಶ್ರಮವಿದೆ. ಈ ಎಲ್ಲವೂ ಮೈಸೂರಿನ ಪ್ರಸಿದ್ಧ ಮಹಾರಾಜರಾಗಿದ್ದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಹಾಕಿದ ಅಡಿಪಾಯದ ಮೇಲೆ ಎದ್ದು ನಿಂತಿರುವ ಭವ್ಯ ಸೌಧವಾಗಿದೆ.

ಇವರ ಸಾಧನೆ, ಕೊಡುಗೆ ಪರಿಗಣಿಸಿ, ಇಂದು ಮೈಸೂರಿನ ವಿಮಾನ ನಿಲ್ದಾಣಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಹೆಸರು ಇಡಲು ರಾಜ್ಯ ಸರಕಾರ ನಿರ್ಧರಿಸಿದೆ. ಕನ್ನಡ ನಾಡಿನಲ್ಲಿ ಇಂದಿಗೂ ಅವರನ್ನು ನವ ಕರ್ನಾಟಕದ ಪಿತಾಮಹ ಎಂದೇ ಜನರು ಪೂಜಿಸುತ್ತಾರೆ. ಅವರ ಹೆಸರಿನಲ್ಲಿ ಸರಕಾರ ಪ್ರತಿ ವರ್ಷ ಸಾಧಕರಿಗೆ ಪ್ರಶಸ್ತಿ ನೀಡುತ್ತದೆ.


### ■ ಆರ್ಥಿಕ ಪ್ರಗತಿ ಮತ್ತು ಕೈಗಾರಿಕಾ ಕ್ಷೇತ್ರದ ಕೊಡುಗೆಗಳು


ನಾಲ್ವಡಿಯವರ ಆಡಳಿತವು ವೈಜ್ಞಾನಿಕ ಮತ್ತು ಕೈಗಾರಿಕಾ ಪ್ರಗತಿಗೆ ಆದ್ಯತೆ ನೀಡಿತು. ಇವರು ತಮ್ಮ ದಿವಾನರಾಗಿದ್ದ ಸರ್. ಎಂ. ವಿಶ್ವೇಶ್ವರಯ್ಯ ಅವರಂತಹ ತಜ್ಞರಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡಿ ಕ್ರಾಂತಿಕಾರಿ ಯೋಜನೆಗಳನ್ನು ಜಾರಿಗೆ ತಂದರು.

- ಜಲ ವಿದ್ಯುತ್ ಉತ್ಪಾದನೆ: 1902 ರಲ್ಲಿ ಶಿವನಸಮುದ್ರದ ಕಾವೇರಿ ನದಿಯಲ್ಲಿ ಜಲ ವಿದ್ಯುತ್ ಯೋಜನೆಯನ್ನು ಸ್ಥಾಪಿಸಲಾಯಿತು. ಇದು ಏಷ್ಯಾ ಖಂಡದಲ್ಲಿಯೇ ಮೊದಲ ಬಾರಿಗೆ ಸ್ಥಾಪನೆಯಾದ ಬೃಹತ್ ಜಲ ವಿದ್ಯುತ್ ಉತ್ಪಾದನಾ ಕೇಂದ್ರವಾಗಿದೆ.
- ಈ ವಿದ್ಯುತ್ ಅನ್ನು ಮೊದಲು ಕೋಲಾರದ ಚಿನ್ನದ ಗಣಿಗೆ ಒದಗಿಸಲಾಯಿತು. ನಂತರ 1905 ರಲ್ಲಿ, ಬೆಂಗಳೂರಿನಲ್ಲಿ ಬೀದಿ ದೀಪಗಳನ್ನು ಅಳವಡಿಸಲಾಯಿತು.
- ನೀರಾವರಿ ಮತ್ತು ಕೃಷಿ ಕ್ರಾಂತಿ: ಕಾವೇರಿ ನದಿಗೆ ನಿರ್ಮಿಸಿದ ಕೃಷ್ಣರಾಜಸಾಗರ (ಏಖಖ) ಅಣೆಕಟ್ಟು ಮೈಸೂರು ಸಂಸ್ಥಾನದ ಕೃಷಿ ಇತಿಹಾಸದಲ್ಲಿ ಒಂದು ಮೈಲಿಗಲ್ಲು. ಇದರಿಂದ ಲಕ್ಷಾಂತರ ಎಕರೆ ಭೂಮಿಗೆ ನೀರಾವರಿ ಸೌಲಭ್ಯ ದೊರೆತು, ಮಂಡ್ಯ ಜಿಲ್ಲೆಯಲ್ಲಿ ಕಬ್ಬು ಬೆಳೆಗಾರರು ಆರ್ಥಿಕವಾಗಿ ಸದೃಢರಾದರು.

### ■ ಪ್ರಮುಖ ಕೈಗಾರಿಕೆಗಳು:

- ಭದ್ರಾವತಿಯಲ್ಲಿ ಮೈಸೂರು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ (ಗಿಖಖಐ).






- ಮೈಸೂರು ಸ್ಯಾಂಡಲ್‌ವುಡ್ ಆಯಿಲ್ ಫ್ಯಾಕ್ಟರಿ.
- ಮೈಸೂರು ಪೇಪರ್ ಮಿಲ್ಸ್ ಸ್ಥಾಪನೆ.

### ■ ಶೈಕ್ಷಣಿಕ ಕ್ರಾಂತಿ ಮತ್ತು ಜ್ಞಾನ ಕೇಂದ್ರಗಳ ಸ್ಥಾಪನೆ:

ಶಿಕ್ಷಣವೇ ಪ್ರಗತಿಯ ಮೂಲ ಎಂದು ನಂಬಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಶಿಕ್ಷಣ ಕ್ಷೇತ್ರಕ್ಕೆ ನೀಡಿದ ಕೊಡುಗೆಗಳು ಅನನ್ಯ.

- ಮೈಸೂರು ವಿಶ್ವವಿದ್ಯಾಲಯ (1916): ಇವರು ಸ್ಥಾಪಿಸಿದ ಈ ವಿಶ್ವವಿದ್ಯಾಲಯವು ಭಾರತದಲ್ಲಿಯೇ ಮೊಟ್ಟಮೊದಲ ಬಾರಿಗೆ ಸ್ವತಂತ್ರ ಭಾರತೀಯ ಸಂಸ್ಥಾನವೊಂದರಿಂದ ಸ್ಥಾಪನೆಯಾದ ವಿಶ್ವವಿದ್ಯಾಲಯ ಎಂಬ ಹೆಗ್ಗಳಿಕೆ ಹೊಂದಿದೆ.
- ಕಡ್ಡಾಯ ಪ್ರಾಥಮಿಕ ಶಿಕ್ಷಣ: ರಾಜ್ಯದಾದ್ಯಂತ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯಗೊಳಿಸಿದ ಮೊದಲ ಆಡಳಿತಗಾರರಲ್ಲಿ ಇವರು ಒಬ್ಬರು.
- ತಾಂತ್ರಿಕ ಶಿಕ್ಷಣಕ್ಕೆ ಒತ್ತು: ಬೆಂಗಳೂರಿನಲ್ಲಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ (IISc) ಸ್ಥಾಪನೆಗೆ 371 ಎಕರೆ ಭೂಮಿ ಮತ್ತು ಅಪಾರ ಹಣಕಾಸು ನೆರವು ನೀಡಿದರು.
- ಬನಾರಸ್ ಹಿಂದೂ ವಿಶ್ವವಿದ್ಯಾಲಯ (BHU): ಇದರ ಸ್ಥಾಪನೆಗೆ ಸಹಕಾರ ನೀಡಿ, ಅದರ ಪ್ರಥಮ ಕುಲಾಧಿಪತಿ (Chancellor) ಆಗಿದ್ದರು.
- ಸಾಮಾಜಿಕ ನ್ಯಾಯ ಮತ್ತು ಪ್ರಜಾಪ್ರಭುತ್ವ ಸುಧಾರಣೆಗಳು
- ಮಹಿಳಾ ಸಬಲೀಕರಣ:
- ಸಾರ್ವಜನಿಕ ಸಂಸ್ಥೆಗಳಿಗೆ ಮತ್ತು ರಾಜಕೀಯ ಪ್ರಕ್ರಿಯೆಗಳಲ್ಲಿ ಮಹಿಳೆಯರು ಭಾಗವಹಿಸಲು ಅವಕಾಶ ನೀಡಿದರು.
- ಮೈಸೂರು ಸಂಸ್ಥಾನವು ಮಹಿಳೆಯರಿಗೆ ಮತದಾನದ ಹಕ್ಕನ್ನು ನೀಡಿದ ಭಾರತದ ಪ್ರಥಮ ಸಂಸ್ಥಾನಗಳಲ್ಲಿ ಒಂದಾಗಿದೆ.
- ವಿಧವೆಯರಿಗೆ ವಿದ್ಯಾರ್ಥಿವೇತನ ಮತ್ತು ಶಿಕ್ಷಣಕ್ಕೆ ಪ್ರೋತ್ಸಾಹ ನೀಡಲಾಯಿತು.
- ಜಾತಿ ತಾರತಮ್ಯ ನಿಷೇಧ: 1915 ರಲ್ಲಿ ಸಾರ್ವಜನಿಕ ಶಾಲೆಗಳಲ್ಲಿ ದಲಿತ ಮಕ್ಕಳಿಗೆ ಪ್ರವೇಶ ನೀಡಲು ಆದೇಶಿಸಿದರು ಮತ್ತು ಅಸ್ಪೃಶ್ಯತೆಯನ್ನು ಅಪರಾಧವೆಂದು ಘೋಷಿಸಿದರು.
- ಬಾಲ ವಿವಾಹ ನಿಷೇಧ: ಕಡ್ಡಾಯವಾಗಿ 8 ವರ್ಷದೊಳಗಿನ ಬಾಲಕಿಯರ ವಿವಾಹವನ್ನು ನಿಷೇಧಿಸುವ ಕಾನೂನು ಜಾರಿಗೊಳಿಸಿದರು.
- ಪ್ರಜಾಪ್ರತಿನಿಧಿ ಸಭೆ: 1881 ರಲ್ಲಿ ಸ್ಥಾಪಿತವಾಗಿದ್ದ ಈ ಸಭೆಯನ್ನು ವಿಸ್ತರಿಸಿ, 1907 ರಲ್ಲಿ ಶಾಸನ ಸಭೆ (Legislative Council) ಯನ್ನು ರಚಿಸಿದರು. ಇದು ಸಂಸ್ಥಾನದಲ್ಲಿ ಆಡಳಿತವನ್ನು ಮತ್ತಷ್ಟು ಪ್ರಜಾಪ್ರಭುತ್ವೀಕರಣಗೊಳಿಸಿತು.




ರೂಪ ಮಂಜುನಾಥ
ಹೊಳೆನರಸೀಪುರ

### ■ ಕನ್ನಡ, ಕಲೆ ಮತ್ತು ಸಂಗೀತದ ಪೋಷಣೆ

- ಕನ್ನಡ ಸಾಹಿತ್ಯ ಪರಿಷತ್ತು (1915): ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯ ಅಭಿವೃದ್ಧಿಗೆಂದು ಈ ಸಂಸ್ಥೆಯನ್ನು ಸ್ಥಾಪಿಸಿ, ಕನ್ನಡ ಚಳುವಳಿಗೆ ಒಂದು ಸಾಂಸ್ಥಿಕ ರೂಪ ನೀಡಿದರು. ಕನ್ನಡ ಭಾಷೆ-ನಾಡು-ನುಡಿಗೆ ಸಂಬಂಧಿಸಿ ಮಹೋನ್ನತ ಕೊಡುಗೆ ನೀಡುತ್ತಿರುವ ಕನ್ನಡ ಸಾಹಿತ್ಯ ಪರಿಷತ್ ಅನ್ನು ಸ್ಥಾಪಿಸಿದ ಕೀರ್ತಿ ಕೂಡ ನಾಲ್ವಡಿಯವರದ್ದು.
- ಸಂಗೀತದ ಪೋಷಕ: ನಾಲ್ವಡಿಯವರು ಸ್ವತಃ ಉತ್ತಮ ಸಂಗೀತಗಾರರಾಗಿದ್ದರು. ಪಿಟೀಲು, ವೀಣೆ, ಸಿತಾರ್, ಮೃದಂಗ ಸೇರಿದಂತೆ ಹಲವು ವಾದ್ಯಗಳನ್ನು ನುಡಿಸುತ್ತಿದ್ದರು. ಇವರ ಆಸ್ಥಾನದಲ್ಲಿ ಕರ್ನಾಟಕ ಮತ್ತು ಹಿಂದೂಸ್ತಾನಿ ಸಂಗೀತ ಪದ್ಧತಿಗಳ ಹಲವಾರು ದಿಗ್ಗಜ ಕಲಾವಿದರು ಪೋಷಣೆಗೆ ಒಳಗಾಗಿದ್ದರು.

ಇವರ ಸಾಧನೆ, ಕೊಡುಗೆ ಪರಿಗಣಿಸಿ, ಇಂದು ಮೈಸೂರಿನ ವಿಮಾನ ನಿಲ್ದಾಣಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಹೆಸರು ಇಡಲು ರಾಜ್ಯ ಸರಕಾರ ನಿರ್ಧರಿಸಿದೆ. ಕನ್ನಡ ನಾಡಿನಲ್ಲಿ ಇಂದಿಗೂ ಅವರನ್ನು ನವ ಕರ್ನಾಟಕದ ಪಿತಾಮಹ ಎಂದೇ ಜನರು ಪೂಜಿಸುತ್ತಾರೆ. ಅವರ ಹೆಸರಿನಲ್ಲಿ ಸರಕಾರ ಪ್ರತಿ ವರ್ಷ ಸಾಧಕರಿಗೆ ಪ್ರಶಸ್ತಿ ನೀಡುತ್ತದೆ.

ನಾಲ್ವಡಿ ಕೃಷ್ಣರಾಜ ಒಡೆಯರ್‌ರ ಮರಣ ಸಂದರ್ಭದಲ್ಲಿ ಅವರ ಬಳಿ ಸುಮಾರು 400 ಮಿಲಿಯನ್ ಯುಎಸ್ ಡಾಲರ್ ವೈಯಕ್ತಿಕ ಸಂಪತ್ತು ಇತ್ತು. ಅವರು ವಿಶ್ವದ ಶ್ರೀಮಂತ ವ್ಯಕ್ತಿಗಳಲ್ಲಿ ಒಬ್ಬರಾಗಿದ್ದರು. ಅವರ ಆಳ್ವಿಕೆಯಲ್ಲಿ, ಮೈಸೂರು ವಿಶ್ವದಲ್ಲೇ ಅತ್ಯುತ್ತಮ ಆಡಳಿತದ ರಾಜ್ಯವೆಂದು ಹೆಸರುವಾಸಿಯಾಗಿತ್ತು. ಇವಿಷ್ಟೇ ಸಾಕು ಅವರ ಆಡಳಿತದ ವೈಭವವನ್ನು ನೆನಪಿಸಲು.

ಈ ಸಮಗ್ರ ಮತ್ತು ದೂರದೃಷ್ಟಿಯ ಆಡಳಿತದಿಂದಾಗಿ, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಮೈಸೂರನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಿದ ಮತ್ತು ಆಧುನಿಕ ಯುಗಕ್ಕೆ ಅಡಿಪಾಯ ಹಾಕಿದ ದೊರೆ ಎಂದು ಅಜರಾಮರರಾಗಿದ್ದಾರೆ. ಇಂಥ ದುರದೃಷ್ಟಿಯ ನಾಯಕರು ನಮಗೆ ದೊರಕಿದ್ದು ನಮ್ಮ ನಾಡಿನ ಪುಣ್ಯ! ಇಂಥ ಪುತ್ರರನ್ನು ನಾಡಿಗೆ ಕೊಡುಗೆಯಾಗಿ ನೀಡಿದ ನೀನೇ ಧನ್ಯ ಕನ್ನಡತಾಯಿ! ವಂದನೆಗಳು.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,